## ಅಧ್ಯಾಯ 1

# ಪ್ರೋತ್ಸಾಹಗೊಳಿಸುವಿಕೆ

### ವಂದನೆಗಳು (1:1, 2)

**[1]ನಮ್ಮ ತಂದೆಯಾದ ದೇವರಲ್ಲಿಯೂ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ ಇರುವ ಥೆಸಲೋನಿಕದವರ ಸಭೆಗೆ ಪೌಲ ಸಿಲ್ವಾನ ತಿಮೊಥೆಯ ಎಂಬ ನಾವು [2]ಬರೆಯುವದೇನೆಂದರೆ-ತಂದೆಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ.**

**ವಚನಗಳು 1, 2.** ವಂದನೆ ಹೇಳುವಿಕೆಯು ಹೆಚ್ಚುಕಡಿಮೆ 1 ಥೆಸಲೋನಿಕದಲ್ಲಿರುವ ವಂದನೆಗಳಂತೆಯೇ ಇರುತ್ತದೆ, ಒಂದನ್ನು ಹೊರತು ಪಡಿಸಿ, ಏನೆಂದರೆ ಪೌಲನು ಇಲ್ಲಿ **ತಂದೆ** (πατήρ, *patēr*) ಎಂಬುದಕ್ಕೆ ಮುಂಚೆ **ನಮ್ಮ** (ἡμῶν, *hēmōn*) ಎಂಬುದನ್ನು ಸೇರ್ಪಡೆಗೊಳಿಸಿರುತ್ತಾನೆ (1 ಥೆಸಲೋನಿಕ 1:1ರ ಮೇಲಿನ ಚರ್ಚೆಯನ್ನು ನೋಡಿರಿ). A. T. Robertson ಹೀಗೆ ಬರೆಯುತ್ತಾನೆ, "ಏಕರೂಪವಾಗಿಲ್ಲವಾದರೂ, ಯೇಸು ಕ್ರಿಸ್ತನು ದೇವರೊಂದಿಗೆ ಸಮವಾಗಿ ಸೂಚಿಸಲ್ಪಟ್ಟಿದ್ದಾನೆ." ಅಲ್ಲದೆ 2 ಥೆಸಲೋನಿಕ 1:2ರಲ್ಲಿ ಕಾಣಿಸಿಕೊಳ್ಳುವ ἀπό (*apo,* **ರಿಂದ**) ಎಂಬ ಉಪಸರ್ಗವು, ತಂದೆ ಮತ್ತು ಮಗನು "ಕೃಪೆ ಹಾಗೂ ಶಾಂತಿ ಶಿರಸ್ಸು ಮತ್ತು ಮೂಲ ಆಗಿದ್ದಾರೆ" ಎಂಬುದನ್ನು ಸಹ Robertsonನು ಗಮನಕ್ಕೆ ತರುತ್ತಾನೆ.[1]

### ಥೆಸಲೋನಿಕದವರ ದೃಢನಿಷ್ಠೆಗಾಗಿ ಕೃತಜ್ಞತಾಸ್ತುತಿ (1:3, 4)

**[3]ಸಹೋದರರೇ, ನಾವು ಯಾವಾಗಲೂ ನಿಮ್ಮ ವಿಷಯದಲ್ಲಿ ದೇವರಿಗೆ ಕೃತಜ್ಞತಾಸ್ತುತಿ ಮಾಡುವದಕ್ಕೆ ಬದ್ಧರಾಗಿದ್ದೇವೆ. ಹಾಗೆ ಮಾಡುವದು ಯೋಗ್ಯ; ಯಾಕೆಂದರೆ ನಿಮ್ಮ ನಂಬಿಕೆಯು ಅಭಿವೃದ್ಧಿ ಹೊಂದುತ್ತಾ ಬರುತ್ತದೆ, ಪರಸ್ಪರವಾದ ಪ್ರೀತಿ ನಿಮ್ಮೆಲ್ಲರಲ್ಲಿಯೂ ಹೆಚ್ಚುತ್ತಾ ಬರುತ್ತದೆ. [4]ಹೀಗಿರುವದರಿಂದ ನಿಮಗೆ ಬಂದಿರುವ ಎಲ್ಲಾ ಹಿಂಸೆಗಳಲ್ಲಿಯೂ ನೀವು ಅನುಭವಿಸುತ್ತಿರುವ ಸಂಕಟಗಳಲ್ಲಿಯೂ ತೋರಿ ಬಂದ ನಿಮ್ಮ ತಾಳ್ಮೆ ನಂಬಿಕೆಗಳನ್ನು ನೆನಸಿ ನಿಮ್ಮ ವಿಷಯವಾಗಿ ಹೆಚ್ಚಳಪಟ್ಟು ದೇವರ ಸಭೆಗಳೊಳಗೆ ನಾವೇ ಮಾತಾಡುತ್ತೇವೆ.**

**ವಚನ 3.** ಎರಡು ಪತ್ರಿಕೆಗಳಲ್ಲಿರುವ ಹೋಲಿಕೆಗಳು ಈ ವಚನದಲ್ಲಿಯೂ ಮುಂದುವರೆಯುತ್ತದೆ. 1 ಥೆಸಲೋನಿಕ 1:2, 3ರಲ್ಲಿ, ಪೌಲನು ಅವರಿಗೋಸ್ಕರ ದೇವರಿಗೆ

ಕೃತಜ್ಞತಾಸ್ತುತಿಯನ್ನು ಅರ್ಪಿಸಿದನೆಂದು ಹೇಳಿದನು, ಅದಲ್ಲೇ ಆತನು ಇಲ್ಲಿಯೂ ಮಾಡುತ್ತಾನೆ. ಹೆಚ್ಚು ನಿರ್ದಿಷ್ಟವಾಗಿ, 1 ಥೆಸಲೋನಿಕ 1:3ರಲ್ಲಿ, ಪೌಲನು ಅವರ "ನಂಬಿಕೆಯ ಫಲವಾದ ಕೆಲಸ," "ಪ್ರೀತಿಪೂರ್ವಕವಾದ ಪ್ರಯಾಸ," ಮತ್ತು "ನಿರೀಕ್ಷೆಯಿಂದುಂಟಾದ ಸ್ಥೈರಣೆ" ಇವುಗಳ ಕುರಿತು ಮಾತಾಡಿದನು. ಇಲ್ಲಿ ಆತನು ಅವರ **ನಂಬಿಕೆಯು ಬಹಳವಾಗಿ ಅಭಿವೃದ್ಧಿ ಹೊಂದುತ್ತಾ ಬರುತ್ತದೆ** ಮತ್ತು ಅವರ **ಪ್ರೀತಿಯು . . . ಹೆಚ್ಚುತ್ತಾ ಬರುತ್ತದೆ** ಎಂದು ಹೇಳುತ್ತಾನೆ, ಮತ್ತು ಅವರು ದೃಢನಿಷ್ಠೆಯನ್ನು ತೋರಿಸುತ್ತಿದ್ದರೆಂಬುದನ್ನು ಒತ್ತಿ ಹೇಳುತ್ತಾನೆ. ಆದುದರಿಂದ, ದೃಢನಿಷ್ಠೆಯನ್ನು ಪ್ರೇರಣೆಗೊಳಿಸುವ ನಿರೀಕ್ಷೆಯು ಅವರೊಳಗೆ ಈಗಲೂ ಇರುವದಾಗಿತ್ತು. ಅವರು ಬೆಳೆಯುತ್ತಿದ್ದಾರೆ ಮತ್ತು ಪರಿಪಕ್ವಗೊಳ್ಳುತ್ತಿದ್ದಾರೆಂಬುದನ್ನು ನಾವು ಕಾಣಬಹುದಾಗಿದೆ. ವಾಸ್ತವಾಂಶದಲ್ಲಿ, ಆತನು ತಾನು 1 ಥೆಸಲೋನಿಕ 3:10-12ರಲ್ಲಿ ಮಾಡಿದ ಪ್ರಾರ್ಥನೆಗೆ ಉತ್ತರ ಸಿಕ್ಕಿರುತ್ತದೆಂದು ಹೇಳುತ್ತಿದ್ದಾನೆ. ಅಷ್ಟುಮಾತ್ರವಲ್ಲದೆ, ಈ ಪ್ರೀತಿಯು [ಅವರೊಳಗೆ] **ಪರಸ್ಪರವಾದ** ಪ್ರೀತಿ, ಮೊದಲ ಪತ್ರಿಕೆಯಲ್ಲಿ ಗದರಿಸಬೇಕೆಂದು ಹೇಳಲ್ಪಟ್ಟವರ ಕಡೆಗೆ ಸಹ ಇರುವಂಥ ಪ್ರೀತಿಯಾಗಿರುತ್ತದೆಂಬುದನ್ನು ಆತನು ಸ್ಪಷ್ಟವಾಗಿ ತಿಳಿಸುತ್ತಾನೆ. ಒಂದು ಗದರಿಸುವಿಕೆಯು ತಿರಸ್ಕಾರವೆಂದು ಅರ್ಥವನ್ನು ಕೊಡುವದಿಲ್ಲ. ಒಬ್ಬನು ಪಶ್ಚಾತ್ತಾಪ ಪಡುವಂತೆ ಹಲವಾರು ಸಾರಿ ವಿಧವಿಧವಾಗಿ ಬುದ್ಧಿ ಹೇಳಲ್ಪಟ್ಟಾಗ್ಯೂ ಅದನ್ನು ತಿರಸ್ಕರಿಸುವದಾದರೆ ಮಾತ್ರವೇ ಆತನನ್ನು ಅನ್ಯೋನ್ಯತೆಯೊಳಗಿಂದ ತಿರಸ್ಕರಿಸಲ್ಪಡಬೇಕು (ತೀತನಿಗೆ 3:10, 11).

ಅಲ್ಲದೆ ಆ ಸಹೋದರರಿಗೋಸ್ಕರ ಪ್ರಾರ್ಥನೆ ಮಾಡಬೇಕೆಂಬದಾಗಿ ಪೌಲನಿಗಿದ್ದ ಬದ್ಧತೆಯ ಭಾವವನ್ನು ಸಹ ಗಮನಿಸಿರಿ: **ನಾವು ಯಾವಾಗೂ ನಿಮ್ಮ ವಿಷಯದಲ್ಲಿ ದೇವರಿಗೆ ಕೃತಜ್ಞತಾಸ್ತುತಿ ಮಾಡುವದಕ್ಕೆ ಬದ್ಧರಾಗಿದ್ದೇವೆ.** ಆತನು ಒಂದು ಶಾಸ್ತ್ರೋಕ್ತವಾದ ಜವಾಬ್ದಾರಿಯನ್ನು ಸೂಚಿಸುವ ಪದವನ್ನು ಬಳಸಿದನು. "ಬದ್ಧರಾಗಿದ್ದೇವೆ" ಎಂಬುದು ὀφείλω (*opheilō*) ಎಂಬ ಪದದಿಂಧ ಬಂದದ್ದಾಗಿದ್ದು, ಅದರರ್ಥವು "ಹಣದಂತಹ ಸಾಲದಲ್ಲಿರು, ಲೂಕ 7:41; ಕೆಲವೊಂದು ಸಂಗತಿಯನ್ನು ಮಾಡಲೇ ಬೇಕೆಂಬ ಹಂಗಿನಲ್ಲಿರುವ"[2] ಎಂದಾಗಿರುತ್ತದೆ. ಪೌಲನು ದೇವರನ್ನು ಸ್ತೋತ್ರ ಮಾಡುವ, ಥೆಸಲೋನಿಕದವರಿಗಾಗಿ ಮತ್ತು ಅವರ ಅಭಿವೃದ್ಧಿಯಾಗುತ್ತಿರುವ ನಂಬಿಗೆ ಹಾಗೂ ಪ್ರೀತಿಗಾಗಿ ದೇವರಿಗೆ ಕೃತಜ್ಞತಾಸ್ತುತಿ ಮಾಡುವ ಹಂಗಿನಲ್ಲಿದ್ದನು.

ನಿಶ್ಚಯವಾಗಿಯೂ ಪೌಲನು ಅಷ್ಟೊಂದು ಹಂಗಿನಲ್ಲಿರುವ ಭಾವವನ್ನು ಹೊಂದುವದಕ್ಕೆ ಅದು ಪ್ರೀತಿಯ ಒತ್ತಾಯವೇ ಆಗಿತ್ತು (2 ಕೊರಿಂಥ 5:14). ನಮ್ಮಲ್ಲಿ ಸಹ ಅದೇ ರೀತಿಯ ಪ್ರೀತಿಯು ಇರುವಾಗ, ನಾವು ಅದೇ ರೀತಿಯ ಹಂಗಿನಲ್ಲಿರುವ ಭಾವವನ್ನು ಹೊಂದುತ್ತೇವೆ.

**ವಚನ 4.** ಪೌಲನು ಹತ್ತಿರದ ಸ್ಥಳದಲ್ಲಿರುವ ಬೇರೆ ಸಹೋದರರ ಸಂಪರ್ಕಕ್ಕೆ ಬರುವ ವೇಳೆಯಲ್ಲಿ-ಬಹುಶಃ ಆತನು ಸೇವೆ ಮಾಡುತ್ತಿದ್ದ ಕೊರಿಂಥ ಮತ್ತು ಸುತ್ತಲಿನ ಪ್ರದೇಶಗಳಲ್ಲಿ-ತಾನು ಥೆಸಲೋನಿಕದವರ ಬಗ್ಗೆ ಎಷ್ಟು ಹೆಮ್ಮೆ ಪಡುತ್ತಾನೆಂಬದನ್ನು ಹೇಳಿಕೊಳ್ಳುತ್ತಿದ್ದನು: **ನಿಮ್ಮ ವಿಷಯವಾಗಿ ಹೆಚ್ಚಳಪಟ್ಟು ದೇವರ ಸಭೆಗಳೊಳಗೆ ನಾವೇ ಮಾತಾಡುತ್ತೇವೆ.** ಆತನು ಬಹುಶಃ ಅವರು ಮತ್ತೊಬ್ಬರಿಗೆ ಆದರ್ಶಪ್ರಾಯರು ಆಗಿದ್ದಾರೆಂಬುದನ್ನು ಅವರ ಗಮನಕ್ಕೆ ತರುತ್ತಿದ್ದಾನೆ. "ಹೆಚ್ಚಳಪಟ್ಟು ಮಾತಾಡುತ್ತೇವೆ,"

ಅಥವಾ ಹೊಗಳಿಕೊಳ್ಳುವದು, ಎಂಬುದು ἐγκαυχάομαι (*egkauchaomai*) ಎಂಬ ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿರುತ್ತದೆ, ಅದು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಬಳಸಲ್ಪಟ್ಟಿರುತ್ತದೆ. ಇದು "ಎರಡು en (ದಲ್ಲಿ) ಗಳಿಂದ ಆಳಲ್ಪಡುವದಾಗಿದ್ದು, ಮೊದಲನೆಯದು ಹೆಚ್ಚಳಪಟ್ಟುಕೊಳ್ಳುವಿಕೆ ಲಕ್ಷ್ಯವನ್ನು (ಯಾರ ಬಗ್ಗೆ) ಹೆಸರಿಸುತ್ತದೆ, ನಂತರದ್ದು ಹೆಚ್ಚಳಪಟ್ಟುಕೊಳ್ಳುವ ಸ್ಥಳವನ್ನು ಸೂಚಿಸುತ್ತದೆ."[3] Robert L. Thomasನು ಹೆಚ್ಚಳಪಟ್ಟುಕೊಳ್ಳುವಿಕೆಯ *ಲಕ್ಷ್ಯವು* ಥೆಸಲೋನಿಕದವರು ಮತ್ತು ಹೆಚ್ಚಳಪಟ್ಟು ಮಾತಾಡುವಿಕೆಯು ಇತರ ಸಭೆಗಳು/ಕೂಟಗಳು *ಸ್ಥಳ* ಆಗಿದ್ದವು ಎಂಬದಾಗಿ ಪರಿಗಣಿಸುತ್ತಾನೆ.

ಆತನು ಥೆಸಲೋನಿಕದವರ ಬಗ್ಗೆ ಹೆಚ್ಚಳಪಟ್ಟುಕೊಂಡ ನಿರ್ದಿಷ್ಟವಾದ ಗುಣಸ್ವಭಾವಗಳೆಂದರೆ ಅವರಲ್ಲಿದ್ದ **ತಾಳ್ಮೆ** (ದೃಢನಿಷ್ಠೆ)-ಸಕ್ರಿಯವಾದ ಮತ್ತು ವೀರೋಚಿತವಾಗಿ ಸ್ಥಿರತೆಯಿಂದಿರುವದು-ಮತ್ತು ಅವರ **ನಂಬಿಕೆ**-ದೇವರಲ್ಲಿ ಭರವಸೆ ಮತ್ತು ಅವಲಂಬನೆ, ಅದನ್ನು ಅವರು **ಹಿಂಸೆಗಳಲ್ಲಿಯೂ ಸಂಕಟಗಳಲ್ಲಿಯೂ** ತೋರಿದರು (ನೋಡಿರಿ 1:6). 1 ಥೆಸಲೋನಿಕ 2:14 ತೋರಿಸುವದೇನೆಂದರೆ ಅವರು ತಮ್ಮ "ಸ್ವದೇಶದವರ" ಕೈಗಳಲ್ಲಿ ಬಾಧೆಯನ್ನು ಅನುಭವಿಸಿದರು, ಆದರೆ ಅವರ ವಿರುದ್ಧ ಹಿಂಸೆಗೆ ಮೊದಲು ಪ್ರಚೋದನೆಯನ್ನು ಕೊಟ್ಟವರು ಯೆಹೂದ್ಯರೇ ಆಗಿದ್ದರೆಂಬುದು ನಮಗೆ ಗೊತ್ತಿದೆ (ನೋಡಿರಿ ಅಪೊಸ್ತಲರ ಕೃತ್ಯಗಳು 17:1-9). ಈ ವಚನದಲ್ಲಿ ಬಳಸಲಾಗಿರುವ ಕ್ರಿಯಾಪದ ರೂಪವಾದ **ಅನುಭವಿಸುತ್ತಿರುವ** ಎಂಬದರಿಂದ ಸ್ಪಷ್ಟಗೊಳ್ಳುವದೇನೆಂದರೆ, ಪೌಲನು ಪತ್ರಿಕೆಯನ್ನು ಬರೆಯುತ್ತಿರುವ ವೇಳೆಯಲ್ಲಿ ಅವರು ಇನ್ನೂ ಹಿಂಸೆಗಳನ್ನು ಅನುಭವಿಸುತ್ತಿದ್ದರು ಎಂಬದೆ. ಹೇಗೂ, ಇಲ್ಲಿ ಮುಖ್ಯ ಒತ್ತು ಅವರು ಹಿಂಸೆಯ ಮಧ್ಯದಲ್ಲಿಯೂ ವೀರೋಚಿತವಾಗಿ ಹಾದು ಹೋಗುವವರಾಗಿದ್ದರು ಎಂಬುದರ ಮೇಲೆಯೇ ಕೊಡಲಾಗಿರುತ್ತದೆ.

ಪೌಲನು ಬದಲಾವಣೆ ಮಾಡಿಕೊಳ್ಳಬೇಕಾಗಿರುವ ಸಮಸ್ಯೆಯ ಕಡೆಗೆ ಗಮನವನ್ನು ಹರಿಸುವದಕ್ಕೆ ಮುಂಚೆ ತಾನು ಪರಿವರ್ತನೆಗೆ ನಡಿಸಿದವರ ಜೀವಿತಗಳಲ್ಲಿರುವ ಸಕಾರಾತ್ಮಕ ಕಾರ್ಯಗಳನ್ನು ಶ್ಲಾಘಿಸುವದಕ್ಕೆ ಸಿಕ್ಕ ಯಾವದೇ ಅವಕಾಶವನ್ನು ಕಳೆದುಕೊಳ್ಳುತ್ತಿರಲಿಲ್ಲ. ಆದುದರಿಂದ, ಅವರು ಆತನ ತಿದ್ದುವಿಕೆಗಳನ್ನು ಸ್ವೀಕರಿಸಿಕೊಳ್ಳುವ ಸಾಧ್ಯತೆಯು ಬಹಳಷ್ಟಿರುತ್ತಿತ್ತು (2:1-3; 3:6-15).

ಪೌಲನು "ದೇವರ ಸಭೆಗಳೊಳಗೆ" ಎಂದು ಕರೆಯುತ್ತಾನೆ (ಅಥವಾ "ದೇವರಿಗೆ ಸೇರಿದ ಸಭೆಗಳು"; NIV). ಆತನು ಕೊರಿಂಥ, ಅಥೇನೆ, ಬೆರೋಯ, ಮತ್ತು ಬೇರೆ ಕಡೆಗಳಲ್ಲಿರುವ ಸಭೆಗಳನ್ನು ಬಣ್ಣಿಸುತ್ತಿದ್ದಾನೆ, ಆದರೆ ಈ ಬಿರುದು ಒಂದು ಸೂಕ್ತವಾದ ಹೆಸರಾಗಿರಲಿಲ್ಲ. ಬಹುಪಾಲು ತರ್ಜುಮೆಗಳೊಳಗೆ "ಸಭೆಗಳು" ಎಂಬುದಕ್ಕೆ ದೊಡ್ಡಕ್ಷರ ಇಲ್ಲದಿರುವಿಕೆಯನ್ನು ಗಮನಿಸಿರಿ. ಬದಲಾಗಿ, ಈ ಪದಗುಚ್ಛವು ವರ್ಣನಾತ್ಮಕವಾಗಿದ್ದು ಅದು ಸ್ವತ್ತಾಗಿರುವಿಕೆಯನ್ನು ಸೂಚಿಸುತ್ತದೆ: ಅವರು ದೇವರಿಗೆ ಸೇರಿದವರಾಗಿದ್ದರು. ರೋಮಾ 16:16 ರಲ್ಲಿರುವ "ಕ್ರಿಸ್ತನ ಸಭೆಗಳು" ಎಂಬುದರ ವಿಷಯದಲ್ಲಿಯೂ ಅದು ಹಾಗೆಯೇ ಇರುತ್ತದೆ. ಎರಡೂ ದೇವಜನರ ಸಭೆಗಳನ್ನು ಸೂಚಿಸುವದಕ್ಕೆ ಶಾಸ್ತ್ರವು

ಬಳಸುವ ರೀತಿಗಳಾಗಿರುತ್ತವೆ.

## ದೇವರ ನೀತಿಯುಳ್ಳ ನ್ಯಾಯತೀರ್ಪು ಮತ್ತು ಎರಡನೆಯ ಬರೋಣ (1:5-10)

**[5]ದೇವರು ನ್ಯಾಯವಾದ ತೀರ್ಪು ಮಾಡುತ್ತಾನೆಂಬುದಕ್ಕೆ ನಿಮ್ಮ ತಾಳ್ಮೆಯು ಸ್ಪಷ್ಟವಾದ ನಿದರ್ಶನವಾಗಿದೆ. ಯಾವ ದೇವರಾಜ್ಯಕ್ಕೋಸ್ಕರ ನೀವು ಕಷ್ಟವನ್ನನುಭವಿಸುತ್ತೀರೋ ಅದಕ್ಕೆ ನೀವು ಯೋಗ್ಯರಾಗಬೇಕೆಂಬದೇ ದೇವರ ಅಭಿಪ್ರಾಯ. [6]ನಿಮ್ಮನ್ನು ಸಂಕಟಪಡಿಸುವವರಿಗೆ ಪ್ರತಿಯಾಗಿ ಸಂಕಟವನ್ನೂ ಸಂಕಟಪಡುವವರಾದ ನಿಮಗೆ ನಮ್ಮೊಡನೆ ಉಪಶಮನವನ್ನೂ ಕೊಡುವದು ದೇವರ ಎಣಿಕೆಯಲ್ಲಿ ನ್ಯಾಯವಾಗಿದೆಯಷ್ಟೆ. [7]ಯಾವಾಗ ಕೊಡುವನಂದರೆ ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ ಅದನ್ನು ಕೊಡುವನು. [8]ಆಗ ನಮ್ಮ ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತೀಕಾರವನ್ನು ಸಲ್ಲಿಸುವನು. [9-10]ಆ ದಿನದಲ್ಲಿ ಆತನು ತನ್ನ ಪವಿತ್ರರ ಮೂಲಕ ಪ್ರಭಾವ ಹೊಂದುವವನಾಗಿಯೂ ನಾವು ನಿಮಗೆ ಹೇಳಿದ ಸಾಕ್ಷಿಯನ್ನು ನಂಬಿದವರೆಲ್ಲರ ಮೂಲಕ ತನ್ನ ವಿಷಯದಲ್ಲಿ ಆಶ್ಚರ್ಯ ಹುಟ್ಟಿಸುವವನಾಗಿಯೂ ಬರುವಾಗ ಅಂಥವರು ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು.**

**ವಚನ 5.** ಥೆಸಲೋನಿಕದವರು ಅನುಭವಿಸುತ್ತಿದ್ದ "ಹಿಂಸೆಗಳು ಮತ್ತು ಸಂಕಟಗಳು" **ದೇವರು ನ್ಯಾಯವಾದ ತೀರ್ಪು ಮಾಡುತ್ತಾನೆಂಬದಕ್ಕೆ ಸ್ಪಷ್ಟವಾದ ನಿದರ್ಶನ** [ಅಥವಾ ಪುರಾವೆ] ಆಗಿತ್ತು ಮತ್ತು ಅವರು **ದೇವರರಾಜ್ಯಕ್ಕೆ ಯೋಗ್ಯರಾಗಿರುವವರು** ಎಂಬುದಾಗಿ ಎಣಿಸಲ್ಪಡುವರೆಂಬುದನ್ನು ಪುರಾವೆಯಾಗಿತ್ತು. "ಸ್ಪಷ್ಟವಾದ ನಿದರ್ಶನ" ಎಂಬುದು ಗ್ರೀಕ್‌ನ ἔνδειγμα (*endeigma*) ಎಂಬ ಪದದಿಂದ ಬಂದದ್ದಾಗಿದೆ. ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ἔνδειγμα (*endeigma*) ಎಂಬ ಪದವು ಕಾಣಿಸಿಕೊಳ್ಳುತ್ತದಾದರೂ, ಅದರೊಂದಿಗೆ ಸಂಬಂಧ ಹೊಂದಿರುವ ἔνδειξις (*endeixis*, "ಕಾಣಿಸಿಕೊಳ್ಳುವದು") ಎಂಬ ಪದವು ರೋಮಾ 3:25, 26; 2 ಕೊರಿಂಥ 8:24; ಮತ್ತು ಫಿಲಿಪ್ಪಿ 1:28ರಲ್ಲಿ ಕಂಡು ಬರುತ್ತದೆ.[4]

ಈಗಿನ ಹಿಂಸೆಗಳು ಮತ್ತು ಸಂಕಟಗಳು ಕ್ರಮೇಣದಲ್ಲಿ ಒಬ್ಬನು ರಕ್ಷಿಸಲ್ಪಡುವನೆಂಬುದನ್ನು ಸೂಚಿಸುತ್ತವೆಂಬ ಈ ಸಮರ್ಥಿಸುವಿಕೆಯು ಆತ್ಮೀಕನಲ್ಲದ ವ್ಯಕ್ತಿಗೆ ವಿಚಿತ್ರವೆಂದು ತೋರುವದು. ಆತನು ಹೀಗೆ ಉದ್ಗಾರ ತೆಗೆಯುವವನಾಗಿರುತ್ತಾನೆ, "ಈಗ ಹಿಂಸೆಗಳನ್ನು ಅನುಭವಿಸಿದರೆ ಮುಂದೆ ನ್ಯಾಯತೀರ್ಪಿನ ದಿನದಂದು ಅದು ಪರಲೋಕದೊಳಗೆ ಸ್ವೀಕರಿಸಿಕೊಳ್ಳಲ್ಪಡುತ್ತೇವೆಂಬುದನ್ನು ಖಾತ್ರಪಡಿಸುತ್ತದೆಂದು ನಿಮ್ಮ ಮಾತಿನ ಅರ್ಥವೋ?" ಉತ್ತರವು ಹೌದು ಎಂದಾಗಿದೆ. ಮೂಲಭೂತವಾಗಿ, ಪೌಲನು ಅದನ್ನೇ ಹೇಳುತ್ತಿದ್ದಾನೆ.

ಕ್ರಿಸ್ತನ ನಿಮಿತ್ತವಾಗಿ ಬರುವ ಹಿಂಸೆ ಮತ್ತು ಅವಮಾನಗಳು ದೇವರ ಆಶೀರ್ವಾದದ ಸೂಚನೆಗಳಾಗಿವೆ (ಮತ್ತಾಯ 5:11, 12). ಈ ಕಾರ್ಯಗಳು ಸತ್ಯವಾಗಿರುವಾಗ, ಅವುಗಳು "ಪರಲೋಕದಲ್ಲಿ ಬಹಳ ಪ್ರತಿಫಲ"ವು ಕ್ರೈಸ್ತರಿಗೆ ಸಿಕ್ಕುವದು ಎಂಬುದಕ್ಕೆ ಪುರಾವೆಯಾಗಿರುತ್ತವೆ (ಮತ್ತಾಯ 5:12). ನಾವು ಥೆಸಲೋನಿಕದವರ ರೀತಿಯಲ್ಲಿಯೇ ಸಂಕಟಗಳ ಮಧ್ಯದಲ್ಲಿ *ಸಹಿಸಿಕೊಂಡು ಮುನ್ನಡೆಯುವದಾದರೆ* ಮಾತ್ರವೇ ಈ ಅನುಮೋದನೆಯು ಸತ್ಯವಾಗುತ್ತದೆ.

1 ಥೆಸಲೋನಿಕ 3:3 ಮತ್ತು 2 ತಿಮೊಥೆ 3:12 ವಾಕ್ಯಭಾಗಗಳು ಕ್ರೈಸ್ತರಿಗೆ ಹಿಂಸೆಗಳು-ಕೆಲವು ಸಾರಿ ದೈಹಿಕ, ಇನ್ನು ಕೆಲವು ಸಾರಿ ಮಾನಸಿಕವಾದ-ಅನಿವಾರ್ಯವಾಗಿರುತ್ತವೆಂಬುದನ್ನು ಸ್ಪಷ್ಟವಾಗಿ ಒತ್ತಿ ಹೇಳುತ್ತವೆ. ಈ ಸಂಕಟಗಳು ಯಾವದೋ ಒಂದು ರೀತಿಯಲ್ಲಿ ನಮ್ಮನ್ನು ಸಂಕಟಗಳನ್ನು ಅನುಭವಿಸಿದ ಕ್ರಿಸ್ತನಿಗೆ ನಿಕಟವಾಗಿ ಕರೆ ತರುತ್ತವೆ ಎಂದು ಪೌಲನು ಹೇಳುತ್ತಾನೆ (ಕೊಲೊಸ್ಸೆ 1:24). ಖಂಡಿತವಾಗಿಯೂ, ಇದು ಸಂಕಟಗಳನ್ನು ಅನುಭವಿಸುವದು ಶಿಲುಬೆಯ ಮೇಲೆ ಕ್ರಿಸ್ತನು ಮಾಡಿದ ರಕ್ಷಣೆಯನ್ನುಂಟು ಮಾಡುವ ಪ್ರಾಯಶ್ಚಿತ್ತಕ್ಕೆ ಹೆಚ್ಚುವರಿಯಾಗಿ ಕೂಡಿಸುತ್ತದೆಂದರ್ಥವಲ್ಲ, ಆದರೆ ಕ್ರಿಸ್ತನ ದೇಹದ ಅಂಗಗಳು ಬಾಧೆಯನ್ನು ಅನುಭವಿಸುತ್ತಿರುವಾಗ ಆತನು ಸಹ ಬಾಧೆ ಅನುಭವಿಸುವದನ್ನು ಮುಂದುವರೆಸುತ್ತಾನೆಂದಾಗಿದೆ. ಆತನ ದೇಹ ಅಥವಾ ಸಭೆಯು ಅನುಭವಿಸಬೇಕಾಗಿರುವ ಸಂಕಟಗಳು "ಕ್ರಿಸ್ತನ ಸಂಕಟಗಳ" ಭಾಗವಾಗಿರುತ್ತವೆ, ಅದು ಆತನ ಜನರಿಗೆ ಅಂತಿಮ ನ್ಯಾಯತೀರ್ಪಿನ ದಿನದಂದು ರಕ್ಷಣೆಯನ್ನು ಒದಗಿಸುವದು.

ಥೆಸಲೋನಿಕದವರು ಅಂತಿಮವಾಗಿ ದೇವರು ತನ್ನೊಂದಿಗೆ ಇರುವದಕ್ಕಾಗಿ ದೇವಜನರನ್ನು ಒಟ್ಟುಗೂಡಿಸುವಿಕೆಯಲ್ಲಿ ಸೇರ್ಪಡೆಗೊಳ್ಳುವಂತಾಗುವದಕ್ಕೋಸ್ಕರ ದೇವರ ರಾಜ್ಯಕ್ಕಾಗಿಯೇ ಸಂಕಟಗಳನ್ನು ಅನುಭವಿಸುತ್ತಿದ್ದಾರೆಂದ ಪೌಲನು ಈ ವಚನದಲ್ಲಿ ಹೇಳುತ್ತಾನೆ. ಬೇರೊಂದು ಕಡೆಯಲ್ಲಿ ಪೌಲನು ಉಪದ್ರವದಿಂದ ತಾಳ್ಮೆಯು ಹುಟ್ಟುತ್ತದೆ, ಮತ್ತು ತಾಳ್ಮೆಯು ಅನುಭವಸಿದ್ಧಿಯನ್ನುಂಟು ಮಾಡುತ್ತದೆಂದು ಹೇಳುತ್ತಾನೆ (ರೋಮಾ 5:3, 4). ಅದು ನಮ್ಮನ್ನು ಪುಟಾಹಾಕಿ ಶೋಧಿಸುತ್ತದೆ ಮತ್ತು ಸಿದ್ಧಗೊಳಿಸುತ್ತದೆಂದು ಪೇತ್ರನು ಹೇಳುತ್ತಾನೆ (1 ಪೇತ್ರ 1:6, 7).

ಥೆಸಲೋನಿಕದವರು, ಈಗಾಗಲೇ ಮಾಡುತ್ತಿದ್ದ ಪ್ರಕಾರವೇ, ನಂಬಿಗಸ್ತರಾಗಿ ಮುಂದುವರೆಯುವದಾದರೆ, ಅವರು ಪರಲೋಕದ ಸಭೆಯಲ್ಲಿ ಸೇರುವದಕ್ಕೆ ಯೋಗ್ಯರೆಂದು ಎಣಿಸಲ್ಪಡುವರು. ದೇವರ ನಮ್ಮನ್ನು ಕಠಿಣವಾದ ಸಂಕಟಗಳಲ್ಲಿ ಕಾಪಾಡಿಕೊಂಡು ಹೋಗುತ್ತಾನೆಂಬ ವಾಸ್ತವಾಂಸವು ಆತನ ನ್ಯಾಯತೀರ್ಪು ನ್ಯಾಯವಾದದ್ದೆಂಬುದಕ್ಕೆ ಪುರಾವೆಯಾಗಿದೆ, ಆತನು ಈ ಯುದ್ಧದಲ್ಲಿ ನಮ್ಮ ಪಕ್ಷದಲ್ಲಿರುತ್ತಾನೆ, ಮತ್ತು ಆತನು ಬರುವ ವೇಳೆಯಲ್ಲಿ ಲೆಕ್ಕಗಳನ್ನು ಸಮಗೊಳಿಸುವನೆಂಬುದಕ್ಕೆ ಪುರಾವೆಯಾಗಿದೆ. ಅನ್ಯಾಯವು ಯಾವಾಗಲೂ ಆಳ್ವಿಕೆ ಮಾಡಲಾಗದು (ವಚನಗಳು 6, 7; ಪ್ರಸಂಗಿ 3:16, 17). ದೇವರ ರಾಜ್ಯವು ಈಗಾಗಲೇ ಭೂಮಿಯಲ್ಲಿ ತನ್ನನ್ನು ಸಭೆಯ ರೂಪದಲ್ಲಿ ತೋರ್ಪಡಿಸಿಕೊಂಡಿದೆ (ಮತ್ತಾಯ 3:2), ಆದರೆ ಕ್ರಿಸ್ತನು ತನ್ನ ವೈರಿಗಳನ್ನು ಗೆದ್ದುಕೊಂಡಾಗ (1 ಕೊರಿಂಥ 15:26)

ಮತ್ತು ಸ್ವರ್ಗ ರಾಜ್ಯದಲ್ಲಿ ಸರ್ವೋನ್ನತನಾಗಿ ಆಳುವಾಗ ಅದು ಅತ್ಯಂಥ ಪರಿಪೂರ್ಣವಾಗಿ ನೆರವೇರುವದು. ಸ್ವರ್ಗ ರಾಜ್ಯವು (ಇಲ್ಲಿ ಪ್ರಸ್ತಾಪಿಸಲಾಗಿರುವ) ಕ್ರಿಸ್ತನ ಎರಡನೆಯ ಬರೋಣ ಮತ್ತು ನ್ಯಾಯತೀರ್ಪಿನ ಬಳಿಕವಷ್ಟೆ ಪೂರ್ಣವಾಗಿ ನೆರವೇರಿಕೆಗೆ ಬರುವದು (ವಚನಗಳು 6, 7).

ಬಹುಶಃ ನಾವು 1940 ರಲ್ಲಿದ್ದ ಒಬ್ಬ ದೇಶಭಕ್ತನಾದ ಯುವಕನ ಕುರಿತು ಯೋಚಿಸುವ ಮೂಲಕ ಈ ಹಿಂಸೆಯಲ್ಲಿಯೂ ಆನಂದಿಸುವ ಮನೋವೃತ್ತಿಯನ್ನು ಕಲಿತುಕೊಳ್ಳಬಹುದಾಗಿದೆ, "ಯುದ್ಧದ ಪರಿಶ್ರಮಗಳಲ್ಲಿ" ಬೆಂಬಲವನ್ನು ತೋರಿಸುವದು ಜನಪ್ರಿಯವಾಗಿದ್ದ ವೇಳೇ, ಈತನು ಸೇನೆಯ ಸೇವೆಗಳಲ್ಲಿ ಪ್ರವೇಶಿಸುವದಕ್ಕೆ ಅವಕಾಶವು ಕೊಡಲ್ಪಡದಿದ್ದಾಗ ವೇದನೆಗೊಳಗಾಗುತ್ತಿದ್ದನು ಮತ್ತು ಬದಲಾಗಿ "ತನ್ನ ದೇಶಕ್ಕಾಗಿ" ಸೇವೆ ಮಾಡುವದಕ್ಕೆ ಹಾಗೂ ಸಾಯುವದಕ್ಕೆ ಸಹ ಯೋಗ್ಯನೆಂದು ಎಣಿಸಲ್ಪಟ್ಟಿದ್ದಕ್ಕೆ "ಸಂತೋಷ" ಪಡುವವನಾಗಿದ್ದನು. ಕ್ರೈಸ್ತರು ಒಂದು ಯುದ್ಧದಲ್ಲಿದ್ದಾರೆ, ಮತ್ತು ನಾವು ಉಪದ್ರವಗಳನ್ನು ಸಹಿಸಿಕೊಳ್ಳುತ್ತೇವೆಂಬ ವಾಸ್ತವಾಂಶದ ಅರ್ಥವೇನೆಂದರೆ, ನಮ್ಮ ಸೇನಾನಾಯಕನಾದ ಕ್ರಿಸ್ತನು ನಮ್ಮೊಂದಿಗಿದ್ದಾನೆ ಮತ್ತು ನಮ್ಮನ್ನು ಪೋಷಣೆ ಮಾಡುತ್ತಾನೆ ಎಂದಾಗಿದೆ. ಆತನ ಸೈನ್ಯದಲ್ಲಿ ಸೇವೆ ಮಾಡುವದು ಮತ್ತು ಅಂತಹ ಶ್ರೇಷ್ಠ ಧ್ಯೇಯಕ್ಕಾಗಿ ಉಪದ್ರವವನ್ನು ಅನುಭವಿಸುವದು ಒಂದು ಭಾಗ್ಯವಾಗಿರುತ್ತದೆ.

**ವಚನ 6.** ಸತ್ಯಾಂಶವೇನೆಂದರೆ ದೇವರು **ನ್ಯಾಯವಾದ**ವನು ಮತ್ತು ಆ ಕಾರಣದಿಂದ ಆತನು ನ್ಯಾಯವನ್ನು ಒದಗಿಸುವದದು ಸರಿಯಾದದ್ದಾಗಿದೆ. ನ್ಯಾಯವಂತನಾಗಿ ರುವದೆಂದರೆ ಬೇರೆಯವರಿಗೆ ಅವರು ಯಾವದಕ್ಕೆ ಯೋಗ್ಯರಾಗಿರುತ್ತಾರೋ ಅಥವಾ ಅರ್ಹತೆಯುಳ್ಳವರೋ ಅದನ್ನು ಕೊಡುವದು ಎಂದರ್ಥವಾಗಿದೆ. ಒಬ್ಬ ನೀತಿವಂತನು ನಕಾರಾತ್ಮಕವಾಗಿ ಮತ್ತು ಸಕಾರಾತ್ಮಕವಾಗಿ ತನ್ನ ಮಾತನ್ನು ಕಾಪಾಡಿಕೊಳ್ಳುತ್ತಾನೆ. ದೇವರು, ಒಬ್ಬ ನ್ಯಾಯವಂತನಾದ ವ್ಯಕ್ತಿಯ ಹಾಗೆಯೇ, ತನ್ನ ಮಾತುಗಳನ್ನು ಕಾಪಾಡಿಕೊಳ್ಳುತ್ತಾನೆ. ಆದದರಿಂದ, ಆತನು ವಾಗ್ದಾನ ಮಾಡಿದ ಪ್ರಕಾರ (ರೋಮಾ 12:19), ಆತನು ಅವಿಧೇಯರಿಗೆ ದಂಡನೆಯನ್ನು ನೀಡುತ್ತಾನೆ. ಯಾವದೇ ಪಶ್ಚಾತ್ತಾಪವನ್ನು ತೋರದಂಥ ಪಾಪಗಳಿಗೆ ದೇವರು ದಂಡಿಸುವದಿಲ್ಲ ಎಂದು ಯೋಚಿಸುವದು ಒಂದು ಭಯಂಕರವಾದ ತಪ್ಪು ಆಗುವದು (ರೋಮಾ 11:22ರೊಂದಿಗೆ ಹೋಲಿಸಿರಿ).

ಒಂದು ಲೆಕ್ಕದ ಪುಸ್ತಕಗಳು ಸಮತೋಲನಗೊಳಿಸಲ್ಪಡುವವು, ಮತ್ತು ಅಂತಿಮ ನ್ಯಾಯತೀರ್ಪಿನಂದು ಅದು ಸಂಭವಿಸುವ ವೇಳೆ, ಆತನು ಥೆಸಲೋನಿಕದವರನ್ನು ಮತ್ತು ಬೇರೆ ಕ್ರೈಸ್ತರಿಗೆ **ಸಂಕಟಪಡಿಸುವವರಿಗೆ ಪ್ರತಿಯಾಗಿ ಸಂಕಟವನ್ನು** ಕೊಡುವನು. ಥೆಸಲೋನಿಕದವರಿಗೆ ಸಂಕಟವನ್ನುಂಟು ಮಾಡುತ್ತಿದ್ದವರಿಗೆ ಸ್ವತಃ ಕೆಲವು ಕಠಿಣವಾದ ಸಂಕಟಗಳು ಇರುವವು, ಸ್ವತಃ ತಂದೆಯೇ ಅವರನ್ನು ಸಂಧಿಸುವನು. ಅವರು "ನಿತ್ಯನಾಶನವೆಂಬ" ದಂಡನೆಯು ಕೊಡಲ್ಪಡುವದು (ವ. 9). ಗ್ರೀಕ್ ಪದ ἀνταποδίδωμι (*antapodidōmi*) ಎಂಬುದರ ಅರ್ಥವು "ಮುಯ್ಯಿ ತೀರಿಸು" ಅಥವಾ ಅಕ್ಷರಶಃ "ಹಿಂದಕ್ಕೆ ಸಲ್ಲಿಸು" ಎಂದರ್ಥವಾಗಿದೆ. David J. Williams ಹೇಳಿದ್ದೇನೆಂದರೆ, "ಇದು ಕೇವಲ ಒಂದು ಸಾಹಿತ್ಯಕ ರೂಪವಾಗಿದೆ . . . ಮತ್ತು ಉಪಶಮನ ಕೊಡುವಿಕೆ, ಮತ್ತು

ತೊಂದರೆಪಡಿಸುವವರಿಗೆ ಪ್ರತೀಕಾರವನ್ನು ಮಾಡುವದರೊಂದಿಗೆ, ದೇವರು ನ್ಯಾಯವನ್ನು ಒದಗಿಸುವದು ದಂಡನೆಯ ತೀರ್ಪು ಮತ್ತು ಸತ್ಯವನ್ನು ಸ್ಥಾಪಿಸುವದಕ್ಕೆ ಸಂಬಂಧಿಸಿರುತ್ತದೆಂಬುದರಲ್ಲಿ ಯಾವ ಸಂಶಯವೂ ಇಲ್ಲ."[5]

ದೇವರು ನ್ಯಾಯವಂತನಾಗಿದ್ದು ಅನೀತಿಯ ರೀತಿಯಲ್ಲಿ ಜೀವಿಸುವವರಿಗೆ ದಂಡನೆಯನ್ನು ಮಾಡುವದು ಅಗತ್ಯವಾಗುತ್ತದೆ. ಆ ನಿಯಮಕ್ಕೆ ಒಬ್ಬರು ಮಾತ್ರವೇ ಹೊರತಾಗಿರುತ್ತಾರೆ: ಅವರು ಕ್ರೈಸ್ತರೇ, ಅವರ ಅನ್ಯಾಯಗಳನ್ನು ಕ್ರಿಸ್ತನು ಈಗಾಗಲೇ ಒತ್ತುಕೊಂಡಿರುತ್ತಾನೆ (1 ಪೇತ್ರ 2:23, 24).

**ವಚನ 7.** ದೇವರು "ಪ್ರತಿಯಾಗಿ ಸಂಟಕವನ್ನು" ಕೊಡುತ್ತಾನಾದರೂ, ಆತನು ಅವಿಧೇಯರ ಕೈಗಳಲ್ಲಿ ತೊಂದರೆಗೊಳಗಾಗುತ್ತಿದ್ದ (ಹಿಂಸಿಸಲ್ಪಡುತ್ತಿದ್ದ) ಥೆಸಲೋನಿಕದ ಕ್ರೈಸ್ತರಿಗೆ ಅದಕ್ಕೆ ವಿರುದ್ಧವಾದದ್ದನ್ನು ಮಾಡುವನು. ಮೇಜುಗಳು ತಿರುಗಿಸಲ್ಪಡುವವು ಅಥವಾ ತಿರುಗುಮುರುಗುಗೊಳಿಸಲ್ಪಡುವವು, ಮತ್ತು ಆತನು [ಕ್ರೈಸ್ತರಿಗೆ] **ಉಪಶಮನವನ್ನು ಕೊಡುವನು.** "ಉಪಶಮನ" ಎಂಬುದಕ್ಕಿರುವ ಗ್ರೀಕ್ ಪದವು ἄνεσις (*anesis*) ಎಂದಾಗಿದ್ದು, ಅದರರ್ಥವು ವಿಶ್ರಾಂತಿ, ಚಿಂತೆ, ಕಳವಳ, ಅಥವಾ ಹೋರಾಟದಿಂದ ಮುಕ್ತಿ ಎಂದಾಗಿದೆ (2 ಕೊರಿಂಥ 2:13 ರೊಂದಿಗೆ ಹೋಲಿಸಿರಿ). ಪೌಲನು **ನಮ್ಮೊಡನೆ** "ಉಪಶಮನ" ಕೊಡುವನು ಎಂದು ಹೇಳಿದನು. ಅಂದರೆ, ಅದು ಪೌಲನಿಗೂ ಆತನ ಜೊತೆಗೆಲಸದವರಿಗೂ ಕೊಡಲ್ಪಡುವದು. ಅವರು ಸಹ "ಸಂಕಟಗಳನ್ನು" ಅನುಭವಿಸಿದರೆಂಬುದು ಸ್ಪಷ್ಟವಾಗಿ ಸೂಚಿಸಲ್ಪಟ್ಟಿರುತ್ತದೆ. ಇದೆಲ್ಲವೂ **ಯೇಸು ಕರ್ತನು ಪ್ರತ್ಯಕ್ಷನಾಗುವ ಕಾಲದಲ್ಲಿ** ಸಂಭವಿಸುವದು. ಆತನು ಈಗ ಪರಲೋಕದಲ್ಲಿ ಅಡಗಿಸಲ್ಪಟ್ಟಿದ್ದಾನೆ ಅಥವಾ ಮರೆಯಾಗಿದ್ದಾನೆ ಮತ್ತು ಅವರು ಆತನನ್ನು ಪುನಃ ಯುಗಾಂತ್ಯದಲ್ಲಿ ಬಯಲುಗೊಳಿಸುವರು ಅಥವಾ ಪ್ರಕಟಗೊಳಿಸುವರು. ಖಂಡಿತವಾಗಿಯೂ, ಈ ಪ್ರಕಟಣೆಯು ಆತನ ಎರಡನೆಯ ಬರೋಣವನ್ನು ಸೂಚಿಸುತ್ತದೆ. ಆತನು ಈಗ ಗೋಚರನಾಗಿರುವದಿಲ್ಲ, ಆದರೆ ಆತನು ಯುಗಾಂತ್ಯದಲ್ಲಿ ಪುನಃ ಬರುವ ವೇಳೆ, "ಎಲ್ಲರ ಕಣ್ಣುಗಳು ಆತನನ್ನು ಕಾಣುವವು" (ಪ್ರಕಟನೆ 1:7). ಈ ವಿಷಯವು 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯ ಪ್ರತಿಯೊಂದು ಅಧ್ಯಾಯದಲ್ಲಿಯೂ ಮಾತಾನಾಡಲ್ಪಟ್ಟಿರುತ್ತದೆ ಮತ್ತು ಈಗ ಈ ಪತ್ರಿಕೆಯ ಮೊದಲನೆಯ ಅಧ್ಯಾಯದಲ್ಲಿ ಕಾಣಿಸಿಕೊಳ್ಳುತ್ತದೆ.

ಆ ಬರೋಣದ ವಿಷಯದಲ್ಲಿ, ಪೌಲನು ಮೂರು ಕಾರ್ಯಗಳನ್ನು ಹೇಳಿದನು. ಮೊದಲನೆಯದಾಗಿ, ಅದು **ಆಕಾಶದಿಂದ** ಆಗಿದೆ, ಅದು ಯೇಸು ಎಲ್ಲರಿಗೂ ಕಾಣಿಸುವ ಹಾಗೆ ಮೇಘಗಳಿಂದ ಇಳಿದು ಬರುವದನ್ನು ಸೂಚಿಸುತ್ತದೆ (ಅಪೊಸ್ತಲರ ಕೃತ್ಯಗಳು 1:11; 1 ಥೆಸಲೋನಿಕ 1:10). ಎರಡನೆಯದಾಗಿ, ಕ್ರಿಸ್ತನ ಜೊತೆಯಲ್ಲಿ **ಉರಿಯುವ ಬೆಂಕಿ** ಇರುವದು (ವಿಮೋಚನಕಾಂಡ 3:2; ಯೆಶಾಯ 66:15, 16; 2 ಪೇತ್ರ 3:10 ರೊಂದಿಗೆ ಹೋಲಿಸಿರಿ). "ಉರಿಯುವ ಬೆಂಕಿ" (πυρὶ φλογός, *puri phlogos*) ಎಂಬುದು ವೈಭವತೆಯನ್ನೂ ಜೊತೆಗೆ ಅವಿಧೇಯರಿಗಾಗುವ ಪ್ರತೀಕಾರದ ನ್ಯಾಯಸಲ್ಲಿಸುವಿಕೆ ಯನ್ನೂ ಸೂಚಿಸುವಂತೆ ತೋರುತ್ತದೆ. ಅದು ಕೇವಲ ಶುದ್ಧಗೊಳಿಸುವಿಕೆಯ ಸಂಕೇತಕ್ಕಿಂತಲೂ ಹೆಚ್ಚಿನದ್ದಾಗಿದೆ.

Thomas ನು ಹೀಗೆ ಹೇಳುತ್ತಾನೆ, "ಈ ಪದಗುಚ್ಛವು ಕಡ್ಡಾಯವಾಗಿ ಒಂದು ಶುದ್ಧಗೊಳಿಸುವ ಪರಿಣಾಮವನ್ನು ಸೂಚಿಸುತ್ತಿರುವದಾದಲ್ಲಿ, ಅದು 7ನೇ ವಚನಕ್ಕಿಂತಲೂ 8ನೇ ವಚನದೊಂದಿಗೆ ಸಹಜವಾದ ಸಂಬಂಧವನ್ನು ಹೊಂದಿರುವದಾಗಿರುತ್ತದೆ."[6] ಮೂರನೆಯದಾಗಿ, ಆತನು **ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ** ಬರುವನು. ಇವರು 1 ಥೆಸಲೋನಿಕ 3:13ರಲ್ಲಿ ಪೌಲನು ಮತ್ತು ಯೂದನು 14ರಲ್ಲಿ ಪ್ರಸ್ತಾಪಿಸಿದ "ಪರಿಶುದ್ಧರು" ಆಗಿದ್ದಾರೆ. ಈ ವಚನದಲ್ಲಿ, ಅವರು "ಶಕ್ತಿ"ಯುಳ್ಳ ಜೀವಿಗಳೆಂಬುದನ್ನು ಆತನು ಒತ್ತಿ ಹೇಳಿದನು. ಸ್ಪಷ್ಟವಾಗಿರುವ ಹಾಗೆ, ಅವರ ಶಕ್ತಿಯ ಮೂಲವು ದೇವರೇ, ಆತನ ತನ್ನ ನಿಯೋಗಿಗಳು ಅಥವಾ ಸಂದೇಶಕರಾಗಿ ಅವರನ್ನು ಬಲಗೊಳಿಸುತ್ತಾನೆ.

ಈ ಘಟನೆಯಲ್ಲಿ ಯೇಸು ಉರಿಯುವ ಬೆಂಕಿಯಲ್ಲಿ ತನ್ನ ಪರಿಶುದ್ಧ ಮತ್ತು ಶಕ್ತಿಶಾಲಿ ದೇವದೂತರೊಂದಿಗೆ ಕೂಡಿ ಮೇಘಗಳಲ್ಲಿ ಇಳಿದು ಬರುವದು ಕಾಣಿಸುವದು. ಅದೊಂದು ನೆನಪಿನಲ್ಲುಳಿಯುವಂತಹ ಮತ್ತು ವೈಭವದಿಂದ ಕೂಡಿದ ಸಂಭವವಾಗುವದು. ಥೆಸಲೋನಿಕದವರು ಅದನ್ನು ತಮ್ಮ ಪ್ರಿಯರು ತಪ್ಪಿಸಿಕೊಳ್ಳಬಾರದೆಂದು ಬಯಸಿದ್ದರಲ್ಲಿ ಆಶ್ಚರ್ಯವೇನಿಲ್ಲ!

ಒಬ್ಬನು ಇದನ್ನು 1 ಥೆಸಲೋನಿಕ 4:16 ರೊಂದಿಗೆ ಹೋಲಿಸುವಾಗ ಗಮನಿಸತಕ್ಕದ್ದೇನೆಂದರೆ ಪೌಲನು ಇಲ್ಲಿ ಕರ್ತನ ಆಜ್ಞಾಘೋಷವನ್ನು, "ಪ್ರಧಾನದೂತನ ಶಬ್ದ" ಅಥವಾ "ದೇವರ ತುತೂರಿಯ ಧ್ವನಿ" ಕುರಿತು ಪ್ರಸ್ತಾಪವನ್ನು ಮಾಡುತ್ತಿಲ್ಲ; ಆದರೆ, ಆತನು ಈಗಾಗಲೇ ಹೇಳಿರುವ ಪ್ರಕಾರ, ಇವುಗಳೆಲ್ಲವೂ ಕೇಳಿಸಲ್ಪಡುವವು.

**ವಚನ 8.** ಆತನ ಎರಡನೆಯ ಬರೋಣದ ವೇಳೆಯಲ್ಲಿ, ಯೇಸುವು **ಪ್ರತೀಕಾರವನ್ನು ಸಲ್ಲಿಸುವನು.** ಆತನು "ಸೇಡು ತೀರಿಸಿಕೊಳ್ಳುವನು" (KJV), ಮತ್ತು ಆತನು "ನ್ಯಾಯವನ್ನು ಮಾಡುವನು" (NEB). "ಪ್ರತೀಕಾರ" ಎಂಬುದಕ್ಕಿರುವ ಗ್ರೀಕ್ ಪದವು ἐκδίκησις (*ekdikēsis*), ಇದರರ್ಥವು "ನ್ಯಾಯದೊಳಗಿಂದ ಹೊರಡುವಂತದ್ದು; ಹೊರತು ಅನೇಕ ಸಾರಿ ಮನುಷ್ಯರು ಮಾಡುವಂತಹ ಸೇಡು ತೀರಿಸಿಕೊಳ್ಳುವಿಕೆ ರೀತಿಯಲ್ಲಿ ಆಗಿರುವದಿಲ್ಲ . . . ಒಂದು ಗಾಯವನ್ನು ಮಾಡುವ ಅರ್ಥದಲ್ಲಿಯಲ್ಲ. ಅದರಲ್ಲಿ ಪ್ರತೀಕಾರತೆಯ ಯಾವ ಅಂಶವೂ ಇರುವದಿಲ್ಲ."[7] *Ekdikēsis* ಎಂಬುದು "ನ್ಯಾಯವಂತನು" ಎಂಬ ಪದವು ಬರುವಂಥ ಅದೇ ಮೂಲ ಪದಕ್ಕೆ ಸೇರಿದ್ದಾಗಿದೆ. ಈ ಸನ್ನಿವೇಶದಲ್ಲಿ ನ್ಯಾಯವನ್ನು ಮಾಡುವದರ ಕುರಿತಾಗಿಯೇ ಚರ್ಚಿಸಲಾಗುತ್ತಿದೆ (ನೋಡಿರಿ ವ. 6). ಇಲ್ಲಿ ಸೇಡಿನಿಂದ ಪ್ರತೀಕಾರವನ್ನು ಸಲ್ಲಿಸುವ ಯೋಚನೆಯು ಇರುವದಿಲ್ಲ, ಆದರೆ ಬದಲಾಗಿ, ನ್ಯಾಯವನ್ನು ಒದಗಿಸುವ ಯೋಚನೆಯು ಇರುತ್ತದೆ. ಲೂಕ 18:3, 7ರಲ್ಲಿ ಇದೇ ಪದವು ಬಳಸಲ್ಪಟ್ಟಿದೆ.

ಆತನು ಬರುವ ವೇಳೆ ಯಾವ ವ್ಯಕ್ತಿಗಳು ದಂಡಿಸಲ್ಪಡುವರು? **ದೇವರನ್ನರಿಯದವರಿಗೂ ಸುವಾರ್ತೆಗೆ ಒಳಪಡದವರಿಗೂ** ದಂಡನೆಯನ್ನು ನೀಡುವನು. "ದೇವರನ್ನರಿಯದವರು," τοῖς μὴ εἰδόσιν θεὸν (*tois mē eidosin theon*), ಎಂಬ ಪದವು ದೇವರ ಕೋಪವನ್ನು ಹೊಂದಿಕೊಳ್ಳುವ ಜನರನ್ನು ಬಣ್ಣಿಸುತ್ತದೆ. Robertsonನು ಈ ಪದವನ್ನು "*eidos* ಎಂಬುದರ ಚತುರ್ಥೀ ವಿಭಕ್ತಿಯ ಬಹುವಚನದ ಪರಿಪೂರ್ಣ ಸಕ್ರಿಯ

ಕೃದಂತ" ಎಂದು ಕರೆದನು. ಪೌಲನು ಮುಖ್ಯವಾಗಿ ಅನ್ಯಜನರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿದ್ದಾನೆಂದು ಆತನ ಅಭಿಪ್ರಾಯವಾಗಿದೆ (1 ಥೆಸಲೋನಿಕ 4:1-5), "ಸುವಾರ್ತೆಗೆ ಒಳಪಡದವರಿಗೂ" (ವಿಧೇಯರಾಗದವರಿಗೂ) ಎಂಬ ಪದಗುಚ್ಛವು ವಿಶ್ವಾಸಿದ ಯೆಹೂದ್ಯರನ್ನು ಸೂಚಿಸುವದಾಗಿದೆ.[8]

ಒಂದು ಗುಂಪು ಅನ್ಯಜನರದ್ದು ಮತ್ತು ಇನ್ನೊಂದು ಗುಂಪು ಯೆಹೂದ್ಯರದ್ದು ಎಂದು Robertson ಹೇಳುವದು ಸರಿಯಿರುತ್ತದೋ? ಇದು ಸರಿಯಿರಬಹುದಾಗಿದೆ, ಆದರೆ ಅದರ ಬಗ್ಗೆ ನಾವು ಖಚಿತವಾಗಿರುವದಕ್ಕೆ ಸಾಧ್ಯವಿಲ್ಲ. ಯೆಹೂದ್ಯರಲ್ಲಿ ಸಹ ಅನೇಕರು "[ದೇವರನ್ನು] ತಿಳಿಯದೆ ಇದ್ದಾರೆ" ಎಂದು ಹೇಳಲ್ಪಟ್ಟಿದೆ (ಯೋಹಾನ 8:55). ನಿಜವಾದ ಅರ್ಥದಲ್ಲಿ "ಆತನನ್ನು ತಿಳಿಯುವದು" ಎಂದರೆ ರಕ್ಷಣೆ ಹೊಂದುವದು ಎಂದಾಗಿರುತ್ತದೆ (ಯೋಹಾನ 17:3). ಇನ್ನೊಂದೆಡೆಯಲ್ಲಿ, ಅನ್ಯಜನರು ಕೆಲವು ಸಾರಿ "ಅವಿಧೇಯರು" ಎಂದು ಕರೆಯಲ್ಪಟ್ಟಿದ್ದಾರೆ (ರೋಮಾ 11:30). ಆದ್ದರಿಂದ ಪೌಲನು ಎರಡು ಗುಂಪುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದನೆಂಬುದಾಗಿ ನಾವು ಖಚಿತವಾಗಿ ಹೇಳಲಾಗದು. ಆತನು ದೇವರಿಗೆ ಸಂಪೂರ್ಣ ವಿಧೇಯತೆಯನ್ನು ತೋರಿಸದಿರುವ *ಎಲ್ಲರನ್ನೂ* ಸೂಚಿಸುವದಕ್ಕೆ ಇಬ್ರಿಯ-ನಮೂನೆಯ ಸಮಾನಾರ್ಥಕಗಳಾಗಿ ಆ ಪದಗುಚ್ಛಗಳನ್ನು ಬಳಸಿರಬಹುದಾಗಿದೆ. ವಾಕ್ಯಭಾಗವನ್ನು "ದೇವರನ್ನು ಅರಿಯದವರು, ಸುವಾರ್ತೆಗೆ ವಿಧೇಯರಾಗದವರ ಮೇಲೆಯೂ" ಎಂಬದಾಗಿ ಅನುವಾದಿಸಲ್ಪಡಬಹುದಾಗಿದೆ. ನಾವು ಇಲ್ಲಿ ಒಂದು ಮಾತಾಡುತ್ತಿರುವದು ಒಂದು ಗುಂಪಾಗಿದ್ದರೂ ಸರಿಯೇ ಅಥವಾ ಎರಡು ಗುಂಪುಗಳಾಗಿದ್ದರೂ ಸರಿಯೇ, ಮುಖ್ಯ ವಿಷಯವೇನೆಂದರೆ ಇಲ್ಲಿ ಕಂಡು ಬರುವ ಎಲ್ಲರೂ ದಂಡಿಸಲ್ಪಡುವರು ಎಂಬದೆ.

**ವಚನಗಳು 9, 10. ದಂಡನೆಯನ್ನು ಅನುಭವಿಸುವರು** ಎಂಬುದು 8ನೇ ವಚನದಲ್ಲಿ ಚರ್ಚಿಸಲಾದ ಅದೇ ಗ್ರೀಕ್ ಪದದಿಂದ ಬಂದಿರುವದಾಗಿದೆ, ಅದು ಪೂರ್ಣವಾಗಿ ನ್ಯಾಯವನ್ನು ಸಲ್ಲಿಸುವಿಕೆಯನ್ನು ಸೂಚಿಸುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ ಪಾಪವು ದಂಡಿಸಲ್ಪಡದೆ ಹೋಗುವದಿಲ್ಲ (ನೋಡಿರಿ ಇಬ್ರಿಯ 2:1-4). ದಂಡನೆಯು ಯಾವ ಸ್ವಭಾವದ್ದಾಗಿರುವದು? ಅದು **ನಾಶನ** (ὄλεθρος, *olethros*) ಆಗಿರುತ್ತದೆಂದು ಪೌಲನು ಹೇಳಿದನು. ಈ ಹಂತದಲ್ಲಿ, ಯೆಹೋವನ ಸಾಕ್ಷಿಗಳಂತಹ ಕೆಲವು ಜನರು, ಇದರರ್ಥವೆಂದರೆ ಎಲ್ಲಾ ಅವಿಧೆಯರು ಇಲ್ಲದಂತೆ ಹೋಗುವರು ಅಥವಾ ಸಂಪೂರ್ಣ ವಿನಾಶಗೊಳ್ಳುವರು ಎಂದಾಗಿದೆ ಎಂಬದಾಗಿ ಹೇಳುವರು. ಹೇಗೂ, ಈ ಅರ್ಥವು ಪದದಲ್ಲಿ ಇರುವದಿಲ್ಲ. J. E. Frame ಹೇಳಿದ್ದೇನೆಂದರೆ *olethros* ನಲ್ಲಿ "ಪೌಲನ ಪಟ್ಟಿಗಾದರೋ ಕೆಟ್ಟವರ ವಿನಾಶವಲ್ಲ (ಯಾಕೆಂದರೆ ಅವರು ಮರಣಾನಂತರ ಇರುವವರಾಗಿದ್ದಾರೆ . . . ) ಆದರೆ ಅವರು ಕ್ರಿಸ್ತನಿಂದ ಬೇರ್ಪಡಿಸಲ್ಪಡುವರು ಎಂದಾಗಿರುತ್ತದೆ."[9] ಇದನ್ನು 1 ಕೊರಿಂಥ 5:5ರಲ್ಲಿ ಪೌಲನು ಬಳಸುವ *olethros* ದೊಂದಿಗೆ ಹೋಲಿಸಿರಿ, ಅಲ್ಲಿ ಆತನು ಮಲತಾಯಿಯೊಂದಿಗೆ ಸಂಬಂಧವಿಟ್ಟುಕೊಂಡಿದ್ದವನ ಆತ್ಮವು ಕರ್ತನ ಪ್ರತ್ಯಕ್ಷತೆಯ ದಿನದಂದು ರಕ್ಷಣೆ ಹೊಂದುವಂತಾಗಲು ಅವನ ಶರೀರವು "ನಾಶವಾಗಬೇಕೆಂದು" ಪೌಲನು ಆತನನ್ನು ಸೈತಾನನಿಗೆ ಒಪ್ಪಿಸುತ್ತಾನೆ. ಆತನ "ಶರೀರವು ಇಲ್ಲದಂತೆ"

(ಅಸ್ತಿತ್ವದಲ್ಲಿರದಂತೆ) ಆಗಬೇಕೆಂಬುದು ಪೌಲನ ಬಯಕೆಯಾಗಿದ್ದರೆ, ಆ ವ್ಯಕ್ತಿಯು ಸತ್ತು ಹೋಗಿರುತ್ತಿದ್ದನು ಮತ್ತು ಅದರಿಂದ ಆತನು ಪಶ್ಚಾತ್ತಾಪ ಪಡುವ ಹಾಗೂ ಕರ್ತನ ದಿನದಲ್ಲಿ ರಕ್ಷಣೆ ಹೊಂದುವ ಸಾಧ್ಯತೆಯು ಇಲ್ಲದೆ ಹೋಗಿರುತ್ತಿತ್ತು. "ನಾಶನ" ಎಂದು ಹೇಳುವ ಮೂಲಕ ಆತನನ್ನು ಪಶ್ಚಾತ್ತಾಪಕ್ಕೆ ಕರೆ ತರುವಂತಹ ಯಾವದೋ ಒಂದು ವೇದನೆಯನ್ನು ಶರೀರದಲ್ಲಿ ಉಂಟಾಗುವದು ಎಂಬುದು ಪೌಲನ ತಾತ್ಪರ್ಯವಾಗಿತ್ತು.

ನಾವು ಸಹ ಸಂಪೂರ್ಣ ವಿನಾಶ ಎಂಬದಕ್ಕಿಂತಲೂ ಬೇರೆಯಾದ ಹಲವಾರು ಅರ್ಥದಲ್ಲಿ "ನಾಶನ" ಅಥವಾ "ನಾಶಗೊಂಡು" ಎಂಬ ಪದವನ್ನು ಬಳಸಬಹುದಾಗಿದೆ. ವಾಸ್ತವಾಂಶದಲ್ಲಿ, ಒಂದು ಕಾರು ಡಿಕ್ಕಿಯಾಗಿ "ನಾಶಗೊಂಡು" ಹೋಗುವಾಗ, ಅಲ್ಲಿ ಏನೂ ಉಳಿದೇ ಇಲ್ಲ ಎಂಬುದು ನಮ್ಮ ಅರ್ಥವಾಗುವದಿಲ್ಲ, ಅದು ಸಂಪೂರ್ಣ ವಿನಾಶವಾಗಿರುತ್ತದಷ್ಟೆ. ಬದಲಾಗಿ, ನಮ್ಮ ಮಾತಿನ ಅರ್ಥವೇನೆಂದರೆ, ಉಳಿರುವಂತದ್ದ ಪುನಃ ಯಾವ ಉದ್ದೇಶಕ್ಕಾಗಿ ರೂಪಿಸಲ್ಪಟ್ಟಿತ್ತೋ ಆ ಉದ್ದೇಶದ ಬಳಕೆಗೆ ಬಾರದಿರುವಷ್ಟರ ಮಟ್ಟಿಗೆ ನಾಶಗೊಂಡಿದೆ ಅಥವಾ ಧ್ವಂಸಗೊಂಡಿದೆ ಎಂದಾಗಿರುತ್ತದೆ. ಈ ವಾಕ್ಯಭಾಗದಲ್ಲಿ "ನಾಶನ" ಎಂಬುದರ ಅರ್ಥವು ಅದೇ ಆಗಿರುತ್ತದೆ. ಮಾನವನು ಪಾಪದ ಮೂಲಕ ತನ್ನನ್ನು ಸಂಪೂರ್ಣವಾಗಿ "ಹಾಳುಮಾಡಿಕೊಂಡಿದ್ದಾನೆ" ಮತ್ತು ದೇವರು ಆತನನ್ನು ಒಂದು ಸ್ಥಿತಿಗೆ ಒಪ್ಪಿಸುವನು, ಅದರಲ್ಲಿ ಆತನು ನಿತ್ಯನಿತ್ಯಕ್ಕೂ ಹಾಗೆಯೇ ಉಳಿದುಕೊಳ್ಳುವನು (1 ಥೆಸಲೋನಿಕ 5:3ರ ಮೇಲಿನ ಚರ್ಚೆಯನ್ನು ನೋಡಿರಿ).

ಆ ನಾಶನವು **ನಿತ್ಯ** (αἰώνιος, *aiōnios*) ಎಂಬದಾಗಿ ಬಣ್ಣಿಸಲ್ಪಟ್ಟಿದೆ. ನ್ಯಾಯತೀರ್ಪಿನ ನಂತರದ ಯುಗವು "ಸದಾಕಾಲವೂ" ಮುಂದುವರೆಯುವದರಿಂದ (1 ಥೆಸಲೋನಿಕ 4:17), ಈ "ನಾಶನವು" ಎಂದಿಗೂ ಮುಗಿದು ಹೋಗದಂತದ್ದು ಎಂಬುದನ್ನು ನಾವು ಬಲ್ಲೆವು. ಈಗ, ಈ ನಾಶನವು ಸರ್ವವಿನಾಶ ಅಥವಾ ಅಸ್ತಿತ್ವದಲ್ಲಿಲ್ಲದಂತೆ ಹೋಗುವದು ಆಗಿದ್ದರೆ, "ನಿತ್ಯ" ಎಂಬುದನ್ನು ಅದಕ್ಕೆ ಪರಿವರ್ತಕವಾಗಿ ಬಳಸಲ್ಪಡುತ್ತಿರಲಿಲ್ಲ, ಯಾಕೆಂದರೆ ನಿತ್ಯವು ಅಸ್ತಿತ್ವದಲ್ಲಿ ಇಲ್ಲದೆ ಹೋಗುವದೆಂಬುದು ಇಲ್ಲವೇ ಇಲ್ಲ ಎಂದು Marvin R. Vincent ಹೇಳಿದ್ದು ಸರಿಯಾಗಿಯೇ ಇರುತ್ತದೆ.[10]

ಬದಲಾಗಿ ಇಲ್ಲಿ ಇರುವ ವಿಚಾರವೇನೆಂದರೆ, ಅವಿಧೇಯರು ಹಾಳಾದ ಸ್ಥಿತಿಯಲ್ಲಿ ನಿತ್ಯಕಾಲಕ್ಕೂ ಅಸ್ತಿತ್ವದಲ್ಲಿರುವರು ಎಂಬದೆ. ಇದು ಮತ್ತಾಯ 25:46ರಲ್ಲಿ ಪ್ರಸ್ತಾಪಿಸಿರುವ "ನಿತ್ಯಜೀವ" ಎಂಬುದಕ್ಕೆ ತದ್ವಿರುದ್ಧವಾದದ್ದಾಗಿದೆ. ಒಂದು ಆಶೀರ್ವಾದದಿಂದ ತುಂಬಿದ ಗುಣಮಟ್ಟದ ಅಸ್ತಿತ್ವದಲ್ಲಿರುವದಾಗಿದೆ, ಅದು ಮಾತ್ರವೇ "ಜೀವ" ಎಂದು ಕರೆಯಲ್ಪಡುವ ಹಕ್ಕುಳ್ಳದ್ದಾಗಿದೆ. ಇನ್ನೊಂದು ಸ್ಥಿತಿಯು ಸರ್ವವಿನಾಶವಲ್ಲದ್ದಾಗಿದ್ದು ಅದು ಅಸ್ತಿತ್ವದಲ್ಲಿರುವದೇ ಆಗಿದೆ, ಆದರೆ ಅದು ಜೀವವೆಂದು ಕರೆಯಲ್ಪಡುವ ಹಕ್ಕು ಇಲ್ಲದಷ್ಟರ ಮಟ್ಟಿಗೆ ನಾಶನಗೊಂಡ ಸ್ಥಿತಿಯಲ್ಲಿರುವ ಅಸ್ತಿತ್ವವಾಗಿದೆ. ಇದು ಕೇವಲ ನಿತ್ಯವಾಗಿ ಸ್ಥಿರಸ್ಥಾಯಿಗೊಳಿಸಲ್ಪಟ್ಟಿರುವ ಧ್ವಂಸ ಅಥವಾ "ನಾಶನ"ದ ಸ್ಥಿತಿಯಾಗಿರುತ್ತದಷ್ಟೆ.

ಇಲ್ಲಿ ಕ್ರಿಸ್ತನು ಬರುವಾಗ ಆತನು ಅವಿಧೇಯರನ್ನು ದಂಡಿಸುವ ಇನ್ನೊಂದು ಕೋನವನ್ನು ನಾವು ಕಾಣುತ್ತೇವೆ. ಅದರಲ್ಲಿ ಅವರನ್ನು **ಕರ್ತನ ಸಮ್ಮುಖಕ್ಕೆ ದೂರವಾಗಿ** ಮುಚ್ಚಿಬಿಡುವದು ಸೇರಿರುತ್ತದೆ. ಅವರು ದೇವರ ಸನ್ನಿಧಿಯಿಂದ ನಿಷೇಧಿಸಲ್ಪಡುವರು.

ಮತ್ತಾಯ 7:23 ಮತ್ತು 25:41ರಲ್ಲಿ ಕ್ರಿಸ್ತನು "ನನ್ನನ್ನು ಬಿಟ್ಟು ತೊಲಗಿಹೋಗಿರಿ" ಎಂದು ಹೇಳಿದರೆ, ಮತ್ತಾಯ 8:12ರಲ್ಲಿ ಕ್ರಿಸ್ತನು ಬಂಡಾಯಗಾರರನ್ನು "ಕತ್ತಲೆಗೆ ಹಾಕುವರು" ಎಂದು ಹೇಳುತ್ತಾನೆ. ಎಂಥ ಭಯಂಕರವಾದ ಗತಿ-ಸಕಲ ಬೆಳಕು ಮತ್ತು ಪ್ರೀತಿ ಮೂಲಾಧಾರನಿಂದ ದೂರವಾಗಿ ಹಾಕಲ್ಪಡುವದು! ಇದು "ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ" ಇರುವ ಸ್ಥಳವಾಗಿರುತ್ತದೆಂಬುದರಲ್ಲಿ ಆಶ್ಚರ್ಯವೇನಿಲ್ಲ (ಮತ್ತಾಯ 22:13). ಇದನ್ನು 1 ಥೆಸಲೋನಿಕ 4:17 ರೊಂದಿಗೆ ವಿರುದ್ಧ ಹೋಲಿಕೆ ಮಾಡಿರಿ, ಅಲ್ಲಿ ನಾವು "ಸದಾಕಾಲವೂ ಕರ್ತನ ಜೊತೆಯಲ್ಲಿ" ಇರುವೆವು.

ಹೊರಗೆ ಹಾಕಲ್ಪಡುವವರು **ಆತನ ಪರಾಕ್ರಮದ ವೈಭವದಿಂದ** ದೂರವಾಗಿ ಗಡಿಪಾರು ಮಾಡಲ್ಪಡುವರು (ಯೆಶಾಯ 2:10-22ರೊಂದಿಗೆ ಹೋಲಿಸಿರಿ). ನ್ಯಾಯತೀರ್ಪಿನ ನಂತರ ವಿಧೇಯರಿಂದ ಆನಂದಿಸಲ್ಪಡುವ ಆತನ ಪರಾಕ್ರಮದ ಮಹಿಮೆ ಮತ್ತು ವೈಭವಗಳನ್ನು ಅವಿಧೇಯರು ಕಾಣುವದಿಲ್ಲ, ಯಾಕೆಂದರೆ ಅವರನ್ನು ದೇವರ ಸನ್ನಿಧಿಯಿಂದ ಗಡಿಪಾರು ಮಾಡಲಾಗುವದು.

8 ಮತ್ತು 9 ವಚನಗಳಲ್ಲಿ ಹೇಳಲಾಗಿರುವ ಘಟನೆಗಳು **ಆ ದಿನದಲ್ಲಿ** ಸಂಭವಿಸುವವು- "ನಮ್ಮ ಕರ್ತನಾದ ಯೇಸು ಪ್ರತ್ಯಕ್ಷನಾಗುವಾಗ" ಎಂದು ಸೂಚಿಸಲ್ಪಟ್ಟಿರುವ ಎರಡನೆಯ ಬರೋಣದ ದಿನವಾಗಿರುತ್ತದೆ (ವ. 7). ಆ ಬರೋಣವು ಸಂಭವಿಸುವಾಗ, ಅದು ಎರಡು ಉದ್ದೇಶಗಳಿಗಾಗಿ ಇರುವದು.

ಮೊದಲನೆಯದಾಗಿ, ಕ್ರಿಸ್ತನು **ತನ್ನ ಪವಿತ್ರರಾದವರ ಮೂಲಕ ಪ್ರಭಾವ ಹೊಂದುವದು.** ನಾವು 7ನೇ ವಚನದಲ್ಲಿನ "ಉರಿಯುವ ಬೆಂಕಿ" ಎಂಬುದರಿಂದ ಕಲಿತುಕೊಂಡ ಪ್ರಕಾರ, ಯೇಸುವಿನ ಪ್ರತ್ಯಕ್ಷತೆಯಯು ಮಹಿಮೆಯಿಂದ ಕೂಡಿದ್ದಾಗಿರುವದು (ಅಪೊಸ್ತಲರ ಕೃತ್ಯಗಳು 22:11 ರೊಂದಿಗೆ ಹೋಲಿಸಿರಿ), ಮತ್ತು ಆತನ ಪ್ರಭಾವವು ಆತನ ಜನರ "ಲ್ಲಿ" ತೋರಿಬರುವದೆಂಬದನ್ನು ಈ ವಚನವು ಸೇರ್ಪಡೆಗೊಳಿಸುತ್ತದೆ. ಅವರು ಶಕ್ತಿ ಮತ್ತು ಒಳ್ಳೇತನದ ಪ್ರದರ್ಶನವಾಗಿರುವರು, ಅದು ಅಂತಿಮವಾಗಿ ಪುನಃ ಆತನಿಗೇ ಪ್ರಭಾವವನ್ನು ಪ್ರತಿಬಿಂಬಿಸುವದರು (ರೋಮಾ 8:17; ಫಿಲಿಪ್ಪಿ 3:21; 1 ಪೇತ್ರ 2:9 ರೊಂದಿಗೆ ಹೋಲಿಸಿರಿ).

ಗ್ರೀಕ್ ಪದ ἐνδοξάζω (*endoxazō*) ಎಂಬುದುರ ಅರ್ಥವು "ದಲ್ಲಿ ಮಹಿಮೆಯನ್ನು ಹೊಂದುವದು" ಎಂದಾಗಿರುತ್ತದೆ ಮತ್ತು ಇದು ಹೊಸ ಒಡಂಬಡಿಕೆಯೊಳಗೆ ಇಲ್ಲಿ 12ನೇ ವಚನದಲ್ಲಿ ಮಾತ್ರವೇ ಸಿಕ್ಕುತ್ತದೆ. "ತನ್ನ ಪವಿತ್ರರಾದ ಜನರಲ್ಲಿ [*en*]" (NIV) ಎಂಬ ಪದಗುಚ್ಛದಲ್ಲಿ ಉಪಸರ್ಗವು ಪುನರಾವರ್ತಿಸಲ್ಪಟ್ಟಿರುತ್ತದೆ. ಈ ನಿರ್ದಿಷ್ಟವಾದ ರೂಪದಲ್ಲಿರುವ ಈ ಸಹಜವಾದ ಮಾತು ಹೊಸ ಒಡಂಬಡಿಕೆಯೊಳಗೆ ಇಲ್ಲ ಮಾತ್ರವೇ ಕಾಣಿಸುತ್ತದೆ. ದೇವಜನರು ಹೇಗೆ ಆತನ ಪ್ರಭಾವವನ್ನು ಪ್ರತಿಬಿಂಬಿಸುತ್ತಾರೆಂಬುದನ್ನು ಇದು ಒತ್ತಿ ಹೇಳುತ್ತದೆ, ಯಾಕೆಂದರೆ ಅವರು "ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟವರು" (ಎಫೆಸ 2:10). ದೇವರ ರಚನೆಯಲ್ಲಿ, "ಏನೂ ಅಲ್ಲದವರು" "ಏನೋ ಒಂದು ಆಗುತ್ತಾರೆ." ಅವರು ಏನಾಗಿದ್ದಾರೆಂಬುದು ಆ ದಿನದಲ್ಲಿ "ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಿಗಳಿಗೂ" ಸೇರಿದಂತೆ ಸರ್ವರಿಗೂ ಗೊತ್ತಾಗಿ ಬರುವದು (ಎಫೆಸ 3:10), ಮತ್ತು ಅವರು

ಏನಾಗಿದ್ದಾರೆಂಬುದು ಆ ದಿನದಲ್ಲಿ ಅವರ ಸೃಷ್ಟಿಕರ್ತನ ಮಹಿಮೆಗೋಸ್ಕರ ಸಾಧಕವಾಗುವದು (ಗಲಾತ್ಯ 1:24; 1 ಯೋಹಾನ 3:2).[11]

ಎರಡನೆಯದಾಗಿ, "ಆ ದಿನದಲ್ಲಿ" ಆತನು **ನಂಬಿದವರೆಲ್ಲರ ಮೂಲಕ ತನ್ನ ವಿಷಯದಲ್ಲಿ ಆಶ್ಚರ್ಯ ಹುಟ್ಟಿಸುವವನಾಗಿ** ಇರುವನು. ಇಲ್ಲಿ ಹೆಸರಿಸಲ್ಪಟ್ಟಿರುವವರು "ನಂಬಿದವರೆಲ್ಲರು," ಅಥವಾ ಕ್ರೈಸ್ತರು ಆಗಿದ್ದಾರೆ. 9ನೇ ವಚನದಲ್ಲಿ ಅವಿಶ್ವಾಸಿಗಳು ದೇವರ ಸನ್ನಿಧಿಯಿಂದ ಗಡಿಪಾರು ಮಾಡಲ್ಪಡುವರೆಂದು ನಾವು ಓದುತ್ತೇವೆ, ಅದೇ ವೇಳೆಯಲ್ಲಿ ವಿಶ್ವಾಸಿಗಳು ಆತನ ಪ್ರಭಾವವನ್ನು ಪ್ರತಿಬಿಂಬಿಸುವವರಷ್ಟೆ ಅಲ್ಲ, ಆದರೆ ಅವರು ಆತನ ಸನ್ನಿಧಿಯನ್ನು ಕಂಡು "ಆಶ್ಚರ್ಯ" ಪಡುವರು. ಆತನ ಪ್ರಸನ್ನತೆಯು ನಿರೀಕ್ಷೆ ಮಾಡಿದ್ದಕ್ಕಿಂತ ಇನ್ನೂ ಅಧಿಕವಾಗಿ ಪರವಶಗೊಳಿಸುವಂತದ್ದಾಗಿರುವದು, ಆದ್ದರಿಂದ ಅವರು ಮೂಕವಿಸ್ಮಿತರೂ ಆಶ್ಚರ್ಯಚಕಿತರೂ ಆಗುವರು. ಆತನ ಪ್ರಭಾವವನ್ನು ಆತನಿಗೆ ಪ್ರತಿಬಿಂಬಿಸುವವರೊಳಗೆ ಥೆಸಲೋನಿಕದವರು ಸೇರಿರುವರು ಯಾಕೆಂದರೆ ಅವರು ಪೌಲನು ಹೇಳಿದ **ಸಾಕ್ಷಿಯನ್ನು** ಮತ್ತು ಬೋಧನೆಯನ್ನು ಅಂಗೀಕರಿಸಿಕೊಂಡವರಾಗಿದ್ದರು (1 ಥೆಸಲೋನಿಕ 2:13).

## ವಿಜ್ಞಾಪನೆ (1:11,12)

**11ಆ ದಿನವನ್ನು ನಾವು ಎದುರುನೋಡುತ್ತಾ ನಿಮಗೋಸ್ಕರ ಯಾವಾಗಲೂ ಪ್ರಾರ್ಥನೆಮಾಡಿ-ನಮ್ಮ ದೇವರು ನಿಮ್ಮನ್ನು ಕರೆದದ್ದಕ್ಕೆ ತಾನೇ ನಿಮ್ಮನ್ನು ಯೋಗ್ಯರೆಂದು ಎಣಿಸಬೇಕೆಂತಲೂ ಸತ್ಕ್ರಿಯೆಗಳಲ್ಲಿ ಸಂತೋಷಿಸುವ ನಿಮ್ಮ ಸಕಲ ಆಲೋಚನೆಯನ್ನೂ ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನೂ ಶಕ್ತಿಪೂರ್ವಕವಾಗಿ ಸಿದ್ಧಿಗೆ ತರಬೇಕೆಂತಲೂ ಬೇಡಿಕೊಳ್ಳುತ್ತೇವೆ. 12ಹೀಗಾದರೆ ನಮ್ಮ ದೇವರ ಮತ್ತು ಕರ್ತನಾದ ಯೇಸು ಕ್ರಿಸ್ತನ ಕೃಪೆಯಿಂದ ನಿಮ್ಮ ಮೂಲಕ ನಮ್ಮ ಕರ್ತನಾದ ಯೇಸುವಿನ ಹೆಸರಿಗೆ ಮಹಿಮೆ ಉಂಟಾಗುವದು; ಆತನ ಮೂಲಕ ನಿಮಗೂ ಮಹಿಮೆ ಉಂಟಾಗುವದು.**

**ವಚನ 11.** ಪೌಲನು ಥೆಸಲೋನಿಕದವರಿಗಾಗುವ ಅಂತಿಮವಾದ ಸಂಧಾನವನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಂಡಿದ್ದನು, ಆದ್ದರಿಂದ ಆತನು ಮತ್ತು ಆತನ ಜೊತೆಗೆಲಸದವರು ಅವರಿಗೋಸ್ಕರ **ಯಾವಾಗಲೂ** ಪ್ರಾರ್ಥನೆ ಮಾಡುತ್ತಿದ್ದರು (1 ಥೆಸಲೋನಿಕ 3:10; ಕೊಲೊಸ್ಸೆ 1:9-12 ರೊಂದಿಗೆ ಹೋಲಿಸಿರಿ). ಪೌಲನು ಪ್ರಾರ್ಥನೆಗಿರುವ ಪರಿಣಾಮಕಾರಿತ್ವದಲ್ಲಿ ನಿಜವಾಗಿಯೂ ನಂಬಿಕೆಯನ್ನಿಟ್ಟಿದ್ದನು. ಈ ಸಂದರ್ಭದಲ್ಲಿ ಥೆಸಲೋನಿಕದವರಿಗೋಸ್ಕರ ಆತನ ಪ್ರಾರ್ಥನೆಯು ಏನಾಗಿತ್ತೆಂದರೆ, **ನಮ್ಮ ದೇವರು ನಿಮ್ಮನ್ನು ಕರೆದದ್ದಕ್ಕೆ ತಾನೇ ನಿಮ್ಮನ್ನು ಯೋಗ್ಯರೆಂದು ಎಣಿಸಬೇಕು** ಎಂಬದಾಗಿತ್ತು. "ನಿಮ್ಮನ್ನು ಕರೆದದ್ದು" (2 ಕೊರಿಂಥ 5:19) ಎಂಬುದು ದೇವರೊಂದಿಗೆ ಸಂಧಾನಗೊಳ್ಳುವಂತೆ ನೀಡಲಾದ ಆಮಂತ್ರಣವನ್ನು ಸೂಚಿಸುತ್ತದೆ (1 ಕೊರಿಂಥ 1:26). "ಯೋಗ್ಯರೆಂದು ಎಣಿಸಲ್ಪಡಬೇಕು" ಎಂದರೆ (ವ. 5; ನೋಡಿರಿ 1 ಥೆಸಲೋನಿಕ 2:12) ನಾವು ಪಾಪಗಳನ್ನು ಮಾಡಿದ ಅಪರಾಧಕ್ಕೊಳಗಾಗಿದ್ದಾಗ್ಯೂ ಆತನ ನಮ್ಮನ್ನು ಯೋಗ್ಯರೆಂದು ಪರಿಗಣಿಸುವಂತಾಗಲು ಆತನ ಕೃಪೆಯ ಮೂಲಕ ದೇವರ ಕ್ಷಮಾಪಣೆಯನ್ನು

ಆನಂದಿಸುವದು ಎಂದರ್ಥವಾಗಿದೆ. ಹೇಗೂ, "ನಾವು ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆಯುವ" ಹೊರತು ಆತನು ಇದನ್ನು ಮಾಡುವದಿಲ್ಲ (ಎಫೆಸ 4:1), ಅದರಲ್ಲಿ ನಮ್ಮ ಪಾಪಗಳನ್ನು ಒಪ್ಪಿಕೊಂಡು ಅವುಗಳಿಗಾಗಿ ಪಶ್ಚಾತ್ತಾಪ ಪಡುವದು ಸೇರಿರುತ್ತದೆ (1 ಯೋಹಾನ 1:8-10). ಅಲ್ಲದೆ ದೇವರು **ಸತ್ಕ್ರಿಯೆಗಳಲ್ಲಿ ಸಂತೋಷಿಸುವ ನಿಮ್ಮ ಸಕಲ ಆಲೋಚನೆಯನ್ನೂ ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನು ಶಕ್ತಿಪೂರ್ವಕವಾಗಿ ಸಿದ್ಧಿಗೆ ತರಬೇಕೆಂದು** ಸಹ ಪೌಲನು ಪ್ರಾರ್ಥಿಸುತ್ತಿದ್ದಾನೆ. ಅವರ "ಸಕಲ ಸದುದ್ದೇಶಗಳು" (NIV) ಆತನ "ಶಕ್ತಿಯ" ಮೂಲಕ ನೆರವೇರಿಸಲ್ಪಡಲೆಂದು ಆತನು ಪ್ರಾರ್ಥಿಸುತ್ತಿದ್ದಾನೆ. "ಸತ್ಕ್ರಿಯೆಗಳು" (ಒಳ್ಳೇತನ) ಪವಿತ್ರಾತ್ಮನ ಫಲಗಳಲ್ಲಿ ಒಂದು ಭಾಗವಾಗಿದೆ (ಗಲಾತ್ಯ 5:22). ಆತನು ಮತ್ತೊಂದಾವರ್ತಿ "ನಂಬಿಕೆಯ ಫಲವಾದ ಕೆಲಸ"ವನ್ನು ಪ್ರಸ್ತಾಪಿಸುತ್ತಾನೆ, ಮತ್ತು ನಿಜವಾದ ನಂಬಿಕೆಯು ಭಕ್ತಿಯ ಕ್ರಿಯೆಗಳನ್ನುಂಟು ಮಾಡುವದೆಂಬುದು ನಮಗೆ ಇನ್ನೊಮ್ಮೆ ಜ್ಞಾಪಿಸಲ್ಪಡುತ್ತದೆ (1 ಥೆಸಲೋನಿಕ 1:3). "ಶಕ್ತಿಪೂರ್ವಕವಾಗಿ" ಎಂಬುದು ἐν δυνάμει (*en dunamei*) ಎಂಬ ಪದದಿಂದ ಬಂದದ್ದಾಗಿದೆ, ಅದರರ್ಥವು "ಶಕ್ತಿಯಲ್ಲಿ" ಎಂದಾಗಿದೆ. ಇದನ್ನು ಪವಿತ್ರಾತ್ಮನ ಮೂಲಕವಾಗಿ "ಕ್ರಿಸ್ತನಲ್ಲಿ" (1 ಕೊರಿಂಥ 1:24) ಇರುವ ದೇವರ ಶಕ್ತಿಯೊಂದಿಗೆ ಹೋಲಿಸತಕ್ಕದ್ದು (1 ಥೆಸಲೋನಿಕ 1:5).[12]

**ವಚನ 12.** ಮನುಷ್ಯರು ಕರ್ತನನ್ನು ಅಂಗೀಕರಿಸಿಕೊಂಡು ಆತನ ಬೋಧನೆಗಳಿಗೆ ವಿಧೇಯರಾಗುವಾಗ, ಅವರಲ್ಲಿ ಆತನ **ಹೆಸರಿಗೆ ಮಹಿಮೆ ಉಂಟಾಗುವದು** (ಯೋಹಾನ 17:10; ಗಲಾತ್ಯ 1:24). ಇನ್ನೊಂದೆಡೆಯಲ್ಲಿ, ನಮ್ಮ ಬೋಧಕನಾದ ಯೇಸುವಿನ ಶ್ರೇಷ್ಠತೆಯು ಆತನ ವಿದ್ಯಾರ್ಥಿಗಳಾದ (**ಆತನ ಮೂಲಕ ನಿಮಗೂ**) ನಮಗೆ ಮಹಿಮೆಯನ್ನು ಉಂಟು ಮಾಡುತ್ತದೆ. ಆತನ ಶ್ರೇಷ್ಠತೆಯ ಕಾರಣದಿಂದಾಗಿ ನಮಗೆ ಮಹಿಮೆ ಬರುತ್ತದೆ. ಇದೆಲ್ಲವೂ **ನಮ್ಮ ದೇವರ ಮತ್ತು ಕರ್ತನದ ಯೇಸು ಕ್ರಿಸ್ತನ ಕೃಪೆಯಿಂದ** [ಅನರ್ಹವಾದ ಕೃಪಾಕಟಾಕ್ಷ] ಬರುವದಾಗಿದೆ.

## ಅನ್ವಯಿಸುವಿಕೆ

ಈ ಮೊದಲನೆಯ ಅಧ್ಯಾಯದ ಪ್ರಮುಖ ಚರ್ಚೆಯಾಂಶವು "ಪ್ರೋತ್ಸಾಹಗೊಳಿಸುವಿಕೆ." ಥೆಸಲೋನಿಕದಲ್ಲಿನ ಸಭೆಯು ಹಿಂಸೆ ಮತ್ತು ಸಂಕಟಗಳ ಕಾರಣದಿಂದ ಹೊಡೆತಕ್ಕೊಳಗಾಗಿತ್ತು ಮತ್ತು ಒಂದು ಉತ್ತೇಜನಗೊಳಿಸುವಂತ ಮಾತಿನ ಅಗತ್ಯತೆಯಲ್ಲಿತ್ತು. ಬಹುಶಃ ಅವರೊಳಗೆ ಕೆಲವರು "ನಾವು ಸತ್ಯವನ್ನು ಅಂಗೀಕರಿಸಿಕೊಂಡಿರುವದಾದರೆ ಏಕೆ ಈ ಎಲ್ಲಾ ಹಿಂಸೆಯು ನಮಗೆ ಬರುತ್ತಿದೆ?" ಎಂದು ಚಕಿತರಾಗಿರಬಹುದು.

ಪೌಲನು ಪುನಃ ಥೆಸಲೋನಿಕದವರು ತಾನು ಬರೆದ ಮೊದಲನೆಯ ಪತ್ರಿಕೆಯನ್ನು ಹೇಗೆ ಪಡೆದುಕೊಂಡಿದ್ದರೆಂಬ ಕುರಿತು ಸುದ್ದಿಯನ್ನು ಪಡೆದಿದ್ದನು. ಸಭೆಯ ವಿರುದ್ಧ ಹಿಂಸೆಯು ಇನ್ನೂ ಅಧಿಕಗೊಳ್ಳುತ್ತಿದೆ, ಅವರು ಎರಡನೆಯ ಬರೋಣದ ಕುರಿತು ಈಗಲೂ ಅಪಾರ್ಥಗಳನ್ನು ಹೊಂದಿದ್ದಾರೆಂಬ, ಮತ್ತು ಅವರು ನಂಬಿಕೆಯಲ್ಲಿಯೂ ಪ್ರೀತಿಯಲ್ಲಿಯೂ ಬೆಳೆಯುತ್ತಿದ್ದಾರೆಂಬ ವಿಷಯಗಳನ್ನು ತಿಳುಕೊಂಡಿದ್ದನು.

ಈ ಪತ್ರಿಕೆಯಲ್ಲಿ ಆತನಿಗೆ ಕಳಕಳಿಯು ಎರಡನೆಯ ಬರೋಣದ ಕುರಿತು ಅವರಿಗಿದ್ದ ತಪ್ಪುತಿಳುವಳಿಕೆಗಳನ್ನು ಸರಿಪಡಿಸುವದು ಮತ್ತು ಕ್ರಿಸ್ತನಲ್ಲಿ ಅವರು ಬೆಳವಣಿಗೆಗೊಳ್ಳುವಂತೆ ಪ್ರೋತ್ಸಾಹಿಸುವದು ಆಗಿತ್ತು.

## ದೇವರಿಂದ ಮತ್ತು ಕ್ರಿಸ್ತನಿಂದ ಆಶೀರ್ವಾದ (1:1, 2)

1 ಮತ್ತು 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಗಳೆರಡೂ ಪೌಲ, ಸೀಲ, ಮತ್ತು ತಿಮೊಥೆಯರಿಂದ ಬರೆಲ್ಪಡುವದಾಗಿ ಗುರುತಿಸಲ್ಪಡುತ್ತವೆ. ಸ್ಪಷ್ಟವಾಗಿರುವ ಪ್ರಕಾರ, ಪೌಲನು ಪ್ರಮುಖ ಲೇಖಕನಾಗಿದ್ದನು. ಸೀಲ ಮತ್ತು ತಿಮೊಥೆಯರು ಆತನ ಜೊತೆಯಲ್ಲಿದ್ದ ಕಾರಣ ಅವರ ಹೆಸರುಗಳನ್ನು ಪ್ರಸ್ತಾಪಿಸಲಾಗಿದೆ, ಮತ್ತು ಅವರು ಥೆಸಲೋನಿಕದವರಿಗೆ ಚೆನ್ನಾಗಿ ಪರಿಚಯವಿದ್ದರು.

ದೇವರಿಂದ ಮತ್ತು ಕ್ರಿಸ್ತನಿಂದ ಬರುವಂತಹ ಆಶೀರ್ವಾದಗಳಿರುತ್ತವೆ ಎಂದು ಪೌಲನು ಹೇಳುತ್ತಾನೆ. ಈ ಆಶೀರ್ವಾದಗಳು ನಮಗೆ ಯಾವದೇ ಸಮಯದಲ್ಲಿ ಇರಬಹುದಾದ ಸಕಲ ಅಗತ್ಯತೆಗಳನ್ನು ಸಂಧಿಸುತ್ತವೆ.

*ನಮಗೆ ಮಾಹಿತಿಯನ್ನು ನೀಡುವ ಒಂದು ದೈವಿಕ ಪ್ರಕಟನೆ.* ತಾನು ಈ ಪತ್ರಿಕೆಯನ್ನು ಕಳುಹಿಸುವ ಮೂಲಕ ಅವರು ತಮ್ಮ ಪರಿಸ್ಥಿತಿಯಲ್ಲಿ ಬೇಕಾಗಿರುವ ಮಾರ್ಗದರ್ಶನವನ್ನು ಪಡೆದುಕೊಳ್ಳುವದಕ್ಕೆ ಒಂದು ದೈವಿಕ ಪ್ರಕಟನೆಯನ್ನು ಸ್ವೀಕಸಿರಿಕೊಳ್ಳುವವರಾಗಿರುತ್ತಾರೆ ಎಂಬದನ್ನು ಸೂಚ್ಯಾರ್ಥವಾಗಿ ಹೇಳುತ್ತಾನೆ. ಪೌಲನ ಮುಖಾಂತರವಾಗಿ, ದೇವರು ಅವರಿಗೆ ಹೊಸ ಒಡಂಬಡಿಕೆಯ ಕ್ಯಾನೊನಿನ ಒಂದು ಭಾಗವನ್ನು ಅನುಗ್ರಹಿಸುವವನಾಗಿದ್ದನು.

*ನಮ್ಮನ್ನು ಪೋಷಣೆ ಮಾಡುವ ಒಂದು ದೈವಿಕ ಕೃಪೆ.* ಕೃಪೆಯು ತಂದೆಯಾದ ದೇವರಿಂದಲೂ ಯೇಸು ಕ್ರಿಸ್ತನಿಂದಲೂ ಬರುವದೆಂಬದಾಗಿ ಪೌಲನು ಹೇಳುತ್ತಾನೆ. ವಾಸ್ತವಾಂಶದಲ್ಲಿ, ನಮಗೆ ಅಗತ್ಯವಿರುವ ಕೃಪೆಯನ್ನು ದೇವರು ಮತ್ತು ಕ್ರಿಸ್ತನು ಮಾತ್ರವೇ ಕೊಡಬಲ್ಲರು.

ಕೃಪೆಯು ಅನರ್ಹವಾದ ಕೃಪಾಕಟಾಕ್ಷವಾಗಿರುತ್ತದೆ. ನಾವು ಅದಕ್ಕೆ ಅರ್ಹರಲ್ಲದಿದ್ದಾಗ್ಯೂ ಅಥವಾ ಅದನ್ನು ಸಂಪಾದಿಸಿಕೊಳ್ಳದಿದ್ದಾಗ್ಯೂ, ಆತನ ಕೃಪೆಯ ಮೂಲಕ ನಮಗೆ ನಮ್ಮ ಪಾಪಗಳಿಂದ ರಕ್ಷಣೆ ಸಿಕ್ಕಿರುತ್ತದೆ. ನಾವು ಯೋಗ್ಯರಲ್ಲದಿದ್ದಾಗ್ಯೂ, ಆತನ ಕೃಪೆಯಿಂದಲೇ ನಾವು ನಮ್ಮ ರಕ್ಷಣೆಯಲ್ಲಿ ನಿಂತಿದ್ದೇವೆ. ಎಂಥ ಪ್ರೋತ್ಸಾಹಕರವಾದ ಒಂದು ಯೋಚನೆ!

*ನಮ್ಮನ್ನು ಪ್ರಶಾಂತಗೊಳಿಸುವ ದೈವಿಕ ಶಾಂತಿ.* ಶಾಂತಿಯು ತಂದೆಯಾದ ದೇವರಿಂದ ಮತ್ತು ಯೇಸು ಕ್ರಿಸ್ತನಿಂದ ಬರುತ್ತದೆ. ಈ ಶಾಂತಿಯು ದೇವರ ಕೃಪೆಯಿಂದ ಫಲಿತಗೊಳ್ಳುತ್ತದೆ. ನಾವು ದೇವರ ಕೃಪೆಯ ಮೂಲಕ ರಕ್ಷಿಸಲ್ಪಟ್ಟಿದ್ದೇವೆ; ಮತ್ತು ತತ್ಪರಿಣಾಮವಾಗಿ, ನಮಗೆ ಸುವಾರ್ತೆಗೆ ವಿಧೇಯರಾಗುವದರಿಂದ ಸಿಕ್ಕುವ ಸಮಾಧಾನವು ಇರುತ್ತದೆ (ರೋಮಾ 5:1) ಮತ್ತು ಪ್ರಾರ್ಥನೆಯ ಮೂಲಕ ಬರುವಂತ ಕಾರ್ಯರೂಪದ ಸಮಾಧಾನವು ನಮಗಿರುತ್ತದೆ (ಫಿಲಿಪ್ಪಿ 4:6).

ನಮಗೆ ದೇವರಿಂದ ಒಂದು ಸಂದೇಶದ ಅಗತ್ಯವಿರುತ್ತದೆ, ನಮ್ಮ ಪಾಪಗಳಿಗಾಗಿ ಕೃಪೆ, ಮತ್ತು ನಮ್ಮ ಬಳಲಿಸ ಹೃದಯಗಳಿಗೆ ಸಮಾಧಾನದ ಅಗತ್ಯವಿರುತ್ತದೆ. ದೇವರು ಮತ್ತು ಕ್ರಿಸ್ತನು ಈ ಕೊರತೆಗಳನ್ನು ನೀಗಿಸಿದ್ದಾರೆ, ಮತ್ತು ನಂಬಿಕೆಯ ಮುಖಾಂತರ, ನಾವು ಅವುಗಳನ್ನು ಪಡೆದುಕೊಳ್ಳುತ್ತೇವೆ ಮತ್ತು ಅವುಗಳಲ್ಲಿ ನಡೆಯುತ್ತೇವೆ. EC

**ಇನ್ನಷ್ಟು ಶ್ಲಾಘನೀಯ ಗುಣಭಗಳು (1:3, 4)**

ಪೌಲನು ಪತ್ರಿಕೆಯನ್ನು ಆರಂಭಿಸುತ್ತಿದ್ದಂತೆ ತನ್ನ ಕುರಿತಾಗಿ ಮಾತಾಡಲು ಆರಂಭಿಸುವದಿಲ್ಲವಾದರೂ, ಆತನು ಥೆಸಲೋನಿಕದವರೊಂದಿಗೆ ಚರ್ಚಿಸಲು ಇಚ್ಛಿಸುವ ವಿಷಯದೊಳಗೆ ಓಡುವದಕ್ಕೆ ಮುನ್ನ ಆತನು ಥೆಸಲೋನಿಕದವರನ್ನು ಶ್ಲಾಘಿಸು ವದಕ್ಕಂತೂ ಸಮಯವನ್ನು ತೆಗೆದುಕೊಳ್ಳುತ್ತಾನೆ. ಆತನು ಥೆಸಲೋನಿಕದ ವರನ್ನು ತನ್ನ ಹೃದಯದಲ್ಲಿಟ್ಟುಕೊಂಡಿದ್ದಾನೆ: "ನಿಮ್ಮ ವಿಷಯದಲ್ಲಿ ದೇವರಿಗೆ ಕೃತಜ್ಞತಾಸ್ತುತಿಯನ್ನು ಮಾಡುತ್ತೇವೆ . . ." (ವ. 3); "ನಿಮ್ಮ ವಿಷಯವಾಗಿ ಹೆಚ್ಚಳಪಟ್ಟು . . . ಮಾತಾಡುತ್ತೇವೆ" (ವ. 4); ಮತ್ತು "ನಾವು . . . ನಿಮಗೋಸ್ಕರ ಪ್ರಾರ್ಥನೆ ಮಾಡುತ್ತೇವೆ" (ವ. 11).

ಪೌಲನು ಅವರ ಆತ್ಮೀಕ ಸ್ಥಿತಿಯು ಅವರಿಗೋಸ್ಕರ ಕೃತಜ್ಞತಾಸ್ತುತಿ ಅರ್ಪಿಸುವಂತೆ ತನ್ನನ್ನು ಪ್ರೇರಿಸಿರುತ್ತದೆಂಬುದನ್ನು ತೋರಿಸುವದಕ್ಕೆ, "ನಾವು ಯಾವಾಗಲೂ ನಿಮ್ಮ ವಿಷಯದಲ್ಲಿ ದೇವರಿಗೆ ಕೃತಜ್ಞತಾಸ್ತುತಿ ಮಾಡುವದಕ್ಕೆ ಬದ್ಧರಾಗಿದ್ದೇವೆ" ಎಂಬ ಮಾತುಗಳನ್ನು ಬಳಸುತ್ತಾನೆ (ವ. 3). ಅಲ್ಲದೆ "ಹಾಗೆ ಮಾಡುವದು ಯೋಗ್ಯ"ವಾದ ಕಾರಣ ತಾನು ಕೃತಜ್ಞತಾಸ್ತುತಿ ಮಾಡುತ್ತಿದ್ದೇನೆಂಬದಾಗಿ ಆತನು ಹೇಳುತ್ತಾನೆ. ಈ ಪದಗುಚ್ಛವು ಅವರ ವಿಷಯದಲ್ಲಿ ಪೌಲನು ಅರ್ಪಿಸುತ್ತಿದ್ದ ಕೃತಜ್ಞತಾಸ್ತುತಿಯು ಯೋಗ್ಯವಾಗಿತ್ತೇ ಹೊರತು ಮತ್ತೇನಲ್ಲ ಎಂಬುದನ್ನು ಸೂಚಿಸುತ್ತದೆ.

ಆತನು ಏಕೆ ಥೆಸಲೋನಿಕದವರಿಗಾಗಿ ಕೃತಜ್ಞತಾಸ್ತುತಿ ಮಾಡಿದನು? ನಾವು ನಮ್ಮೊಳಗೆ ಕಾಣಬೇಕಾದಂತಹ ಗುಣಗಳನ್ನು ಆತನು ಅವರಲ್ಲಿ ಕಂಡಿದ್ದನು.

*ಬಲವಾಗಿ ಬೆಳೆದಿರುವಂತಹ ಒಂದು ನಂಬಿಕೆ.* ಅವರ ನಂಬಿಕೆಯು ಅಭಿವೃದ್ಧಿಗೊಂಡಿತ್ತು (ವ. 3). ಅವರು ಹಿಂಸೆಯಿಂದ ಕಡುಸಂಕಟಕ್ಕೊಳಗಾಗಿದ್ದಾಗ್ಯೂ, ಅವರು ದೇವರಲ್ಲಿ ಮತ್ತು ಕ್ರಿಸ್ತನಲ್ಲಿ ಇಟ್ಟ ತಮ್ಮ ವಿಶ್ವಾಸದೊಳಗೆ ಹಂತ ಹಂತವಾಗಿ ಅಭಿವೃದ್ಧಿಗೊಂಡಿದ್ದರು.

ಇದಕ್ಕೆ ಮುಂಚೆ ಪೌಲನು ಅವರ ನಂಬಿಕೆಯ ವಿಷಯದಲ್ಲಿ ಚಿಂತಿತನಾಗಿದ್ದನು (1 ಥೆಸಲೋನಿಕ 3:2, 5) ಮತ್ತು ಅವರ ನಂಬಿಕೆಯಲ್ಲಿರುವ ಕೊರತೆಯನ್ನು ನೀಗಿಸುವದಕ್ಕೋಸ್ಕರ ಮೊದಲನೆಯ ಪತ್ರಿಕೆಯನ್ನು ಬರೆದಿದ್ದನು (1 ಥೆಸಲೋನಿಕ 3:10). ಈಗ, ಸ್ವಲ್ಪ ಕಾಲವಾದ ಬಳಿಕ, ಅವರ ನಂಬಿಕೆಯು ಅವನ ನಿರೀಕ್ಷೆಗಳನ್ನು ಮೀರಿ ಬೆಳೆದದೆ ಎಂಬ ವಾಸ್ತವಾಂಶಕ್ಕೋಸ್ಕರ ಆತನು ಕೃತಜ್ಞತಾಸ್ತುತಿಯನ್ನು ಅರ್ಪಿಸುವದಕ್ಕೆ ಶಕ್ತನಾಗಿದ್ದನು. "ಬಹಳವಾಗಿ ಅಭಿವೃದ್ಧಿ ಹೊಂದುತ್ತಾ" ಎಂಬ ಕ್ರಿಯಾಪದವು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಸಿಕ್ಕುವ ಒಂದು ಬಲವಾದ ಸಂಯುಕ್ತ ಕ್ರಿಯಾಪದವಾಗಿದೆ, ಅದು ಒಂದು ಆರೋಕ್ಯಕರವಾದ ಗಿಡದ ವಿಷಯದಲ್ಲಿ

ಸತ್ಯವಾಗಿರುವಂತೆ ಒಂದು ಜೈವಿಕ ಬೆಳವಣಿಗೆಯನ್ನು ಸೂಚಿಸುತ್ತದೆ.

*ಹೆಚ್ಚುತ್ತಾ ಬಂದಿರುವ ಒಂದು ಪ್ರೀತಿ.* ಅವರಲ್ಲಿ ಪರಸ್ಪರರ ಕಡೆಗಿನ ಪ್ರೀತಿಯು ಹೆಚ್ಚುತ್ತಾ ಬಂದಿತ್ತು (ವ. 3). ಆತನು ಅವರಿಗೆ ಮುಂಚೆ ಬರೆದಿದ್ದ ಪತ್ರಿಕೆಯಲ್ಲಿ ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಅವರಿಗೆ ಕೇಳಿಕೊಂಡಿದ್ದನು, ಮತ್ತು ಈ ಪತ್ರಿಕೆಯಲ್ಲಿ ಅವರ ಬೆಳವಣಿಗೆಗಾಗಿ ಅವರನ್ನು ಶ್ಲಾಘಿಸುತ್ತಾನೆ.

ಅವರು ಪ್ರೀತಿಯಲ್ಲಿ ಹೆಚ್ಚುತ್ತಾ ಬಂದದ್ದು ಸಹ ಆತನು ಪ್ರಾರ್ಥನೆಗೆ ಸಿಕ್ಕ ಉತ್ತರವಾಗಿತ್ತು (1 ಥೆಸಲೋನಿಕ 3:12). ಪ್ರೀತಿಯು ಏನೆಂದರೆ ಪ್ರೀತಿಸಲ್ಪಡುವವನ ವಿಷಯದಲ್ಲಿ ದೇವರ ಚಿತ್ತವನ್ನು ಹುಡುಕುವದಾಗಿರುತ್ತದೆ, ಮತ್ತು ಥೆಸಲೋನಿಕದವರು ಆ ಆತ್ಮೀಕ ದೇಹದಲ್ಲಿದ್ದ ಪ್ರತಿಯೊಬ್ಬರ ವಿಷಯವಾಗಿಯೂ ಇದನ್ನೇ ಮಾಡಿದರು. “ಹೆಚ್ಚುತ್ತಾ ಬರುತ್ತದೆ” ಎಂಬುದು ವಚನದ ಮೊದಲನೆಯ ಭಾಗದಲ್ಲಿರುವ “ಬಹಳವಾಗಿ ಅಭಿವೃದ್ಧಿ ಹೊಂದುತ್ತಾ” ಎಂಬುದಕ್ಕಿಂತಲೂ ಬೇರೆಯಾದ ಭಾವಾರ್ಥವನ್ನು ಹೊಂದಿದೆ. “ಹೆಚ್ಚುತ್ತಾ ಬರುತ್ತದೆ” ಎಂಬುದು ಒಂದು ಬೆಂಕಿ ಅಥವಾ ಪ್ರವಾಹವು ತನ್ನ ದಾರಿಯಲ್ಲಿ ಬರುವ ಎಲ್ಲವನ್ನೂ ಆವರಿಸಿಕೊಳ್ಳು ರೀತಿಯಲ್ಲಿ “ಪ್ರಸರಿಸು” ಎಂಬರ್ಥವನ್ನು ಹೊಂದಿದೆ. ಅವರ ಪ್ರೀತಿಯು ಉಕ್ಕಿ ಹರಿಯಿತು ಮತ್ತು ಎಲ್ಲಾ ಸಹೋದರರರನ್ನು ಆವರಿಸಿಕೊಂಡಿತು.

*ಬೆದರಿಕೆಗಳಿಗೆ ಜಗ್ಗದ ಒಂದು ಅಚಲತೆ.* ಅವರು ಹಿಂಸೆಯ ಹೊರತಾಗಿಯೂ ತಾಳ್ಮೆಯಿಂದ ಮುಂದುವರೆದಿದ್ದಾರೆ (ವ. 4). ಅವರಿಗೆ ಬಂದಂಥ ಹಿಂಸೆಗಳು ಅವರನ್ನು ಸೋಲಿಸುವದಕ್ಕಾಗಿರಲಿಲ್ಲ. ಅವರು ಅವುಗಳನ್ನು ಸಹಿಸಿಕೊಂಡು ಜೀವಿಸುತ್ತಿದ್ದರು.

ಸಂಕಟಗಳ ಮಧ್ಯದಲ್ಲಿಯೂ ಅವರು ನಂಬಿಗಸ್ತರಾಗಿ ನಿಂತಿದ್ದರಿಂದಾಗಿ ಪೌಲನು ಅವರ ವಿಷಯದಲ್ಲಿ ಸಭೆಗಳೊಳಗೆ “ಹೆಚ್ಚಳಪಟ್ಟು ಮಾತಾಡುವದಕ್ಕೆ” ಅಥವಾ “ಹೆಮ್ಮೆಯಿಂದ ಹೇಳಿಕೊಳ್ಳುವದಕ್ಕೆ” (NIV) ಶಕ್ತನಾಗಿದ್ದನು. “ಹೆಮ್ಮೆಯಿಂದ ಮಾತಾಡು” ಎಂಬ ಪದವು ಒತ್ತಿಹೇಳುವ ಜೋಡುಪದವಾಗಿದ್ದು, ಹೀಗೆ ಮಾಡುವದು ಪೌಲನ ಪದ್ಧತಿಯಾಗಿರಲಿಲ್ಲವಾದಾಗ್ಯೂ, ಥೆಸಲೋನಿಕದವರ ವಿಷಯವು ಎಷ್ಟೊಂದು ಗಮನಾರ್ಹವಾಗಿತ್ತೆಂದರೆ ಆತನು ಹಾಗೆ ಮಾಡುವದಕ್ಕೆ ಒತ್ತಾಯಿಸಲ್ಪಟ್ಟನು ಎಂಬುದನ್ನು ಸೂಚಿಸುತ್ತದೆ.

4ನೇ ವಚನದಲ್ಲಿರುವ “ತಾಳ್ಮೆ” ಎಂಬುದು ಗ್ರೀಕ್ ನ ὑπομονή (*hupomonē*) ಎಂಬ ಪದವಾಗಿರುತ್ತದೆ. ಇದು “ಕೆಳಗೆ” ಎಂಬ ಉಪಸರ್ಗ ಮತ್ತು “ನೆಲೆಯಾಗಿರು” ಎಂಬ ಕ್ರಿಯಾಪದಗಳನ್ನೊಳಗೊಂಡ ಒಂದು ಸಂಯುಕ್ತ ಪದದ ರೂಪವಾಗಿದೆ. ಅಕ್ಷರಶಃ, ಇದು ಸೂಚಿಸುವದೇನೆಂದರೆ, “ಒಂದು ಅತ್ಯಂಥ ಭಾರದ ಕೆಳಗಿರುವದು ಮತ್ತು ಅದನ್ನು ನಿಷ್ಠೆಯಿಂದ ಸಹಿಸಿಕೊಳ್ಳುವದು” ಎಂಬುದೆ. ಇದು ಭಾರವಾದ ಮೂಟೆಗಳನ್ನು ಹೇರಲ್ಪಟ್ಟ ಆದರೆ ಭಾರದ ಕೆಳಗೆ ದೃಢವಾಗಿ ನಿಲ್ಲುವ ಒಂದು ಹೇರುಗತ್ತೆಯ ಚಿತ್ರಣವನ್ನು ನೆನಪಿಗೆ ತರುತ್ತದೆ.

ಹಿಂಸೆಗಳು ಮತ್ತು ಸಂಕಟಗಳ ನಡುವಿನ ವ್ಯತ್ಯಾಸವೇನು? “ಹಿಂಸೆಗಳು” ವಿಶೇಷವಾಗಿ ಕ್ರಿಸ್ತನಲ್ಲಿಟ್ಟಿರುವ ನಂಬಿಕೆಯ ನಿಮಿತ್ತವಾಗಿ ಉಂಟಾಗುವ ಬಾಧೆಗಳಾಗಿವೆ. ಅವುಗಳೊಳಗೆ ಕ್ರಿಸ್ತನಿಗೋಸ್ಕರ ಜೀವಿಸುವ ಕಾರಣದಿಂದಾಗ ದೈಹಿಕ ಮತ್ತು ಮಾನಸಿಕ

ನೋವು ಸೇರಿರುತ್ತದೆ. “ಸಂಕಟಗಳು” ಜೀವಿತಕ್ಕೆ ಒತ್ತಡ ಅಥವಾ ನೋವನ್ನು ಸೇರ್ಪಡೆಗೊಳಿಸುವಂತಹ ಯಾವದೇ ವಿಧವಾದ ತೊಂದರೆಗಳನ್ನು ಸೂಚಿಸುವ ಸಾಮಾನ್ಯವಾದ ಪದವಾಗಿರುತ್ತದೆ.

ಥೆಸಲೋನಿಕದಲ್ಲಿನ ಸಭೆಯು, ಒಂದು ಅಮೂಲ್ಯವಾದ ಹಣ್ಣಿನ ರೀತಿ ಹಿಂಸೆಗಳು ಹಾಗೂ ಸಂಕಟಗಳ ಒತ್ತಡದಲ್ಲಿ ಸಿಲುಕಿಕೊಂಡಿತ್ತು. ಅವರು ನಂಬಿಕೆಯೆಂಬ ಹಣ್ಣಿನ ರಸವನ್ನ ಬಿಟ್ಟರು ಮತ್ತು ಪ್ರೀತಿಯ ಸುವಾಸನೆಯಿಂದ ತುಂಬಿದ್ದರು. ಪೌಲನು ತನ್ನ ಪತ್ರಿಕೆಯಲ್ಲಿ, ತಮ್ಮ ಮುಖ್ಯ ಗಮನವನ್ನು ಒತ್ತಡದ ಉತ್ಪನ್ನಗಳಾದ ನಂಬಿಕೆ, ಪ್ರೀತಿ, ಮತ್ತು ತಾಳ್ಮೆಗಳ ಕಡೆಗೆ ಕೊಟ್ಟಷ್ಟು ರೀತಿಯಲ್ಲಿ ದುರಂತದ ಕಡೆಗೆ ಅಷ್ಟೇನೂ ಕೊಡಲಿಲ್ಲ.

ನೀವು ಈ ಸಭೆಯನ್ನು ಸ್ಥಾಪಿಸಿದ್ದಾದರೆ, ನೀವು ಅವರ ಆತ್ಮೀಕ ಬೆಳವಣಿಗೆಯ ಕುರಿತು ಸಹ ಕಳಕಳಿಯನ್ನು ಹೊಂದಿರುವಿರಿ. ಅವರು ನಂಬಿಕೆಯಲ್ಲಿ ಅಭಿವೃದ್ಧಿಯಾಗುತ್ತಿದ್ದಾರೆ, ಅವರ ಪರಸ್ಪರ ಪ್ರೀತಿಯಲ್ಲಿ ಬೆಳೆಯುತ್ತಿದ್ದಾರೆ, ಮತ್ತು ಹಿಂಸೆಯಲ್ಲಿ ತಾಳ್ಮೆಯಿಂದಿದ್ದಾರೆ ಎಂಬ ಸುದ್ಧಿಯು ನಿಮಗೆ ಅತ್ಯಂತ ದೊಡ್ಡ ಪ್ರೋತ್ಸಾಹವಾಗುವದು.

ನಮಗೆ ತಿಳಿದಿರುವ ಕ್ರೈಸ್ತರನ್ನು ಅದೇ ರೀತಿಯಲ್ಲಿಯೇ ಪ್ರೋತ್ಸಾಹಗೊಳಿಸೋಣ. ಅಷ್ಟುಮಾತ್ರವಲ್ಲದೆ, ನಮ್ಮ ಜೀವಿತಗಳಲ್ಲಿ ಅದೇ ಗುಣಗಳು ಇರುವಂತೆ ಖಾತ್ರಿ ಪಡಿಸಿಕೊಳ್ಳೋಣ. EC

## ತಾಳ್ಮೆ: ದೇವರ ನ್ಯಾಯವಾದ ತೀರ್ಪಿಗೆ ಒಂದು ಸೂಚನೆ (1:4, 5)

ನ್ಯಾಯತೀರ್ಪು ಈ ಅಧ್ಯಾಯದಲ್ಲಿ ಒಂದು ಪ್ರಾಮುಖ್ಯವಾದ ಚರ್ಚೆಯಾಂಶವಾಗಿದೆ. 4 ಮತ್ತು 5 ವಚನಗಳಲ್ಲಿ, ಹಿಂಸೆಯನ್ನು ತಾಳಿಕೊಳ್ಳುವದು “ದೇವರು ನ್ಯಾಯವಾದ ತೀರ್ಪು ಮಾಡುತ್ತಾನೆಂಬದಕ್ಕೆ ಸ್ಪಷ್ಟವಾದ ನಿದರ್ಶನವಾಗಿದೆ” ಎಂಬದಾಗಿ ಪೌಲನು ಬರೆಯುತ್ತಾನೆ. ಈ ಕಲ್ಪನೆಯು ನಮಗೆ ಗೊಂದಲವನ್ನುಂಟು ಮಾಡಬಹುದು. ನಾವು ಹೀಗೆ ಹೇಳುವದಕ್ಕೆ ಒಲವು ತೋರಬಹುದು, “ತಾಳು, ಪೌಲನೇ, ನೀನು ಅದನ್ನು ತಿರುಗುಮುರುಗಾಗಿ ಹೇಳುತ್ತಿಲ್ಲವೇ? ಈ ಸಂಕಟಗಳೆಲ್ಲವೂ ದೇವರು ನಮ್ಮನ್ನು ಮರೆತು ಬಿಟ್ಟಿದ್ದಾನೆಂಬುದನ್ನು ತೋರಿಸುವದಿಲ್ಲವೋ?” ನಿಶ್ಚಯವಾಗಿಯೂ, ಉತ್ತರವು “ಇಲ್ಲ” ಎಂದಾಗಿರುತ್ತದೆ!

ಆತನಿಗಿಂತ ಮುಂಚೆ ಕ್ರಿಸ್ತನು ವಾದಿಸಿದ ರೀತಿಯಲ್ಲಿಯೇ ಪೌಲನು ವಾದಿಸುತ್ತಾನೆ. ಕ್ರಿಸ್ತನ ನಿಮಿತ್ತವಾದ ಹಿಂಸೆಗಳು ದೇವರಿಂದ ಆಶೀರ್ವಾದದ ಸೂಚನೆಗಳಾಗಿರುತ್ತವೆ. ಎಲ್ಲಾ ಸಂಕಟಗಳು ಸಹ ಆಶೀರ್ವಾದಗಳೆಂದು ಇಲ್ಲಿ ಹೇಳುತ್ತಿಲ್ಲ. ಬದಲಾಗಿ ಕ್ರಿಸ್ತನ ನಿಮಿತ್ತವಾಗಿ ಬಾಧೆಯನ್ನನುಭವಿಸುವದು ಎಂಬುದನ್ನು ಪೌಲನು ಮತ್ತು ಯೇಸು ಮನಸ್ಸಿನಲ್ಲಿಟ್ಟುಕೊಂಡು ಹೇಳಿದರು. ಅಲ್ಲದೆ, ನಾವು ಅವುಗಳನ್ನು ಅನುಭವಿಸಿದರೆ ಮಾತ್ರವೇ ಅವುಗಳು ಆಶೀರ್ವಾದವಾಗಿರುತ್ತವೆ. ನಾವು ಹಾಗೆ ಮಾಡಿದಾಗ, ನಾವು “ದೇವರರಾಜ್ಯಕ್ಕೆ ಯೋಗ್ಯರಾಗಿ ಎಣಿಸಲ್ಪಡುವೆವು” (ವ. 5), ಅಥವಾ ಯೇಸುವು ಹೇಳಿದ ಹಾಗೆ, “ಪರಲೋಕದಲ್ಲಿ ನಿಮಗೆ ಬಹಳ ಪ್ರತಿಫಲ ಸಿಕ್ಕುವದು” (ಮತ್ತಾಯ 5:12).

ಈ ಭಾವನೆಗಳು ಇಲ್ಲಿ-ಮತ್ತು-ಈಗ ಎಂಬುದನ್ನು ಅಲ್ಲಿ-ಮತ್ತು-ಆಗ ಎಂಬುದರೊಂದಿಗೆ ವಿರುದ್ಧ ಹೋಲಿಕೆ ಮಾಡುತ್ತವೆ. ಇಲ್ಲಿ ಮತ್ತು ಈಗ ಎಂಬುದರ

ಪ್ರಕಾರವಾಗಿ, ಯೇಸು ಹೇಳಿದ್ದೇನೆಂದರೆ, "ಆ ತೀರ್ಪು ಏನೆಂದರೆ-ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವದರಿಂದ ಅವರು ಬೆಳಕಿಗಿಂತಲೂ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು" (ಯೋಹಾನ 3:19). ಈ ಲೋಕದಲ್ಲಿ, ಕ್ರಿಸ್ತನು ಹಗೆತನವನ್ನು ಎದುರಿಸಿದನು, ಮತ್ತು ಕ್ರೈಸ್ತರು ಸಹ ಹಗೆತನವನ್ನು ಎದುರಿಸುವರು. ಕ್ರೈಸ್ತರು ಪ್ರಾಮಾಣಿಕರಾಗಿರಬೇಕು, ಬೇರೆಯವರು ಸ್ವತ್ತನ್ನು ಗೌರವಿಸಬೇಕು, ಲೈಂಗಿಕವಾಗಿ ನಿರ್ಲರಾಗಿರಬೇಕು, ಮತ್ತು ಅಸಭ್ಯವಾದ ತಮಾಷೆ ಅಥವಾ ಸಂಭಾಷಣೆಯಲ್ಲಿ ತೊಡಗಿಸಿಕೊಳ್ಳದೆ, ಆರೋಗ್ಯಕರವಾದ ಸಂಭಾಷಣೆಯನ್ನು ಕಾಪಾಡಿಕೊಳ್ಳಬೇಕು. ಕ್ರೈಸ್ತರಾಗಿ, ನಾವು ಸಮಾಜದ ಸ್ವಭಾವಕ್ಕೆ ವಿರುದ್ಧವಾಗಿ ಜೀವಿಸಬೇಕಾಗುತ್ತದೆ, ಮತ್ತು ಈ ಕಾರಣದಿಂದಾಗಿ, ನಮ್ಮ ಜೀವಿತಗಳು ಆಗ ಮತ್ತು ಅಲ್ಲಿ ಎಂಬುದಕ್ಕೆ ಸಾಕ್ಷಿಯಾಗುತ್ತವೆ.

ಆಗ ಮತ್ತು ಅಲ್ಲಿ, ಅಥವಾ ಪರಲೋಕಕ್ಕಾಗಿಯೇ ನಾವು ಹಂಬಲಿಸುವವರಾಗಿದ್ದೇವೆ. ನಂಬಿಕೆಯ ಮೂಲಕ, ಪರಿಸ್ಥಿತಿಗಳು ಬದಲಾಗುವವೆಂದು ಮತ್ತು ನಾವು ಪರಲೋಕದಲ್ಲಿ ಹಗೆತನವನ್ನು ಎದುರ್ಗೊಳ್ಳುವದಿಲ್ಲ ಎಂಬುದನ್ನು ಬಲ್ಲೆವು. ನಾವು ಅಂಗೀಕಾರವನ್ನು ಆನಂದಿಸುವೆವು ಮತ್ತು *ನಮ್ಮ* ಲೋಕದಲ್ಲಿ ಇರುತ್ತೇವೆ. ನಾವು "ದೇವರರಾಜ್ಯಕ್ಕೆ ಯೋಗ್ಯರೆಂದು ಎಣಿಸಲ್ಪಡುವೆವು."

ನಾವು ಕ್ರಿಸ್ತನಲ್ಲಿ ನಿರೀಕ್ಷೆಯಿಟ್ಟಿದ್ದೇವೆಂದು ಬಲ್ಲವರಾಗಿರುವದರಿಂದ, ನಾವು ಆತನಿಗೋಸ್ಕರ ಬಾಧೆಯನ್ನನುಭವಿಸುವಾಗ, ನಾವು ಪಾತ್ರಗಳು ತಿರುಗುಮುರುಗಾ ಗುವದನ್ನು ಎದುರು ನೋಡುತ್ತೇವೆ (ವಚನಗಳು 6, 7; ನೋಡಿರಿ ಲೂಕ 16:25). ಹಿಂಸೆ ಪಡಿಸುವವರು, ಒಂದು ಪಶ್ಚಾತ್ತಾಪ ಪಡುವ ಹೊರತು, ಅವರು ತಮ್ಮ ದಂಡನೆಯನ್ನು ಹೊಂದಿಕೊಳ್ಳುವರು. ಕ್ರಿಸ್ತನ ನಿಮಿತ್ತವಾಗಿ ಬಾಧೆಯನ್ನನುಭವಿಸುವವರು ತಮ್ಮ ಪ್ರತಿಫಲವನ್ನು ಹೊಂದಿಕೊಳ್ಳುವರು. ಅವರು ಪರಲೋಕದಲ್ಲಿ ಸಂತೈಸಲ್ಪಡುವರು. EE

## ದೇವರ ದೃಷ್ಟಿಕೋನದಿಂದ (1:5, 6)

ಒಂದು ಸಭೆಯ ಸೂಚನಾಫಲಕದಲ್ಲಿ ಹೀಗೆ ಬರೆದಿತ್ತು, "ದೇವರ ದೃಷ್ಟಿಕೋನದಿಂದ ಶಿಕ್ಷಣ." ಇಲ್ಲಿ ಪೌಲನು ಅವರು ಅನುಭವಿಸುತ್ತಿದ್ದ ಹಿಂಸೆಯ ಬಗ್ಗೆ ಮಾತಾಡುತ್ತಾನೆ. ಆತನು ಥೆಸಲೋನಿಕದವರಿಗೆ ಈ ಹಿಂಸೆಗಳನ್ನು "ದೇವರ ದೃಷ್ಟಿಕೋನದಿಂದ" ನೋಡುವಂತೆ ಅವಕಾಶ ಕೊಟ್ಟನು ಎಂದು ನೀವು ಹೇಳಬಹುದು.

ಆತನು ಅದರ ಕುರಿತು ಏನು ಹೇಳಿದನು? ಹಿಂಸೆಯ ಕುರಿತಾದ ದೇವರ ದೃಷ್ಟಿಕೋನವನ್ನು ನಾವು ನೋಡುವಾಗ, ನಮಗೆ ನಾವು ಅಳವಡಿಸಿಕೊಳ್ಳಬೇಕಾದ ದೃಷ್ಟಿಕೋನವು ಕಂಡು ಬರುವದು.

*ದೇವರು ಹಿಂಸೆಯನ್ನು ಅನುಮತಿಸುತ್ತಾನೆ.* ಹಿಂಸೆಯು "ದೇವರ ನ್ಯಾಯವಾದ ತೀರ್ಪು" ಎಂದು ಪೌಲನು ಹೇಳುತ್ತಾನೆ. ಕ್ರೈಸ್ತರು ಸಂಕಷ್ಟಗಳನ್ನು ಎದುರಿಸದೆಯೇ ದುಷ್ಟಶಕ್ತಿಗಳ ವಿರುದ್ಧದ ಅತ್ಯಂಥ ದೊಡ್ಡ ಯುದ್ಧವನ್ನು ನಡಿಸುವದಕ್ಕೆ ಸಾಧ್ಯ? ಕ್ರೈಸ್ತತ್ವದ ಸ್ವಭಾವವನ್ನು ನೋಡುವದಾದರೆ, ಹಿಂಸೆಯು ಹೆಚ್ಚುಕಡಿಮೆ ಅದರಲ್ಲಿ ಅಂತರ್ಗತವಾಗಿಯೇ (ಸ್ವಭಾವಸಿದ್ಧವಾಗಿ) ಬಂದಂಥದ್ದಾಗಿದೆ.

*ಹಿಂಸೆಯು ಅನುಭವಸಿದ್ಧಿಯನ್ನುಂಟು ಮಾಡುವ ಒಂದು ದಾರಿಯಾಗಿರುತ್ತದೆ.* ಒಂದು ಅರ್ಥದಲ್ಲಿ, ಹಿಂಸೆಯ ಮೂಲಕ ನಾವು ಜೀವಿಸುವದರಿಂದ ಅದು ನಮ್ಮನ್ನು ದೇವರ ರಾಜ್ಯಕ್ಕೆ ಯೋಗ್ಯರನ್ನಾಗಿ ಮಾಡುತ್ತದೆ. ಘರ್ಷಣವು ನಮ್ಮ ದೃಢನಿರ್ಧಾರದಲ್ಲಿ ಬೆಳೆಯುವಂತೆ ಮಾಡುತ್ತದೆ, ಮತ್ತು ದೃಢತೀರ್ಮಾನದಲ್ಲಿ ಹೆಚ್ಚಳವಾಗುವಾಗ ಅದರ ಫಲಿತವಾಗಿ ಅನುಭವಸಿದ್ಧಿಯಲ್ಲಿ ಬೆಳವಣಿಗೆಯಾಗುತ್ತದೆ. ಸಂಕಟಗಳಲ್ಲಿ ತಾಳ್ಮೆಯಿಂದಿರುವದು ಪರಿಪಕ್ವತೆಯನ್ನು ಅಭಿವೃದ್ಧಿಗೊಳಿಸುತ್ತದೆಂಬುದು ಪೌಲನ ಸೂಚ್ಯಾರ್ಥವಾಗಿರುತ್ತದೆ.

ನಮ್ಮ ದೃಷ್ಟಿಕೋನದಿಂದ ನೋಡಿದರೆ, ಯಾವ ರೀತಿಯಿಂದಾದರೂ ಬಾಧೆಯನ್ನನುಭವಿಸುವದರಿಂದ ದೂರವಾಗಿರಬೇಕು ಎಂಬದಾಗಿರುತ್ತದೆ. ಹೇಗೂ, ಹೊಸ ಒಡಂಬಡಿಕೆಯ ದೃಷ್ಟಿಕೋನದಿಂದ ನೋಡಿದರೆ, ಕ್ರಿಸ್ತನು ಹಿಂಬಾಲಿಸುವದರಿಂದಾಗುವ ಅನುಭವಸಿದ್ಧಿಯನ್ನುಂಟು ಮಾಡುವ ವೆಚ್ಚವಾಗಿರುತ್ತದೆ. ನಾವು ನ್ಯಾಯವಾಗಿ ಬಾಧೆಯನ್ನನುಭವಿಸುವದರಿಂದ ನಾವು ಯೇಸುವನ್ನೇ ಅನುಕರಣ ಮಾಡುವವರಾಗಿದ್ದೇವೆ. George MacDonaldನು (1824-1905) ಒಮ್ಮೆ ಯೇಸುವಿನ ಶ್ರಮೆಗಳ ವಿಷಯವಾಗಿ ಹೀಗೆ ಹೇಳಿದನು, "ಆತನು ತನ್ನ ಸಹೋದರರು ಹೇಗಿರಬೇಕೆಂದು ಬಯಸಿದ್ದನೋ ಆ ಸಹೋದರರ ಮಧ್ಯದಲ್ಲಿದ್ದನು."[13]

*ಹಿಂಸೆಯ ವಿಷಯಕ್ಕೆ ಬಂದರೆ ದೇವರ ಮಾತೇ ಅಂತಿಮವಾಗಿರುತ್ತದೆ.* ದೇವರು ತನ್ನ ಜನರ ಮೇಲೆ ಹಿಂಸೆಯನ್ನು ತರುವವರನ್ನು ದಂಡಿಸುವನೆಂಬುದನ್ನು ನೀವು ನಿಶ್ಚಯವಾಗಿ ತಿಳಿದುಕೊಳ್ಳಬಹುದು. ದೇವರು ತನ್ನ ಲೋಕದ ಮೇಲೆ ಎಂದಿಗೂ ತನ್ನ ನಿಯಂತ್ರಣವನ್ನು ಕಳಕೊಳ್ಳುವದಿಲ್ಲ. ಅಂತಿಮವಾಗಿ ನೀತಿಯು ವಿಜಯಶಾಲಿಯಾಗುವದು.

ಹಿಂಸೆಯು ಹೆಚ್ಚುಕಡಿಮೆ ಜೀವನದ ವಾಸ್ತವಾಂಶವಾಗಿರುತ್ತದೆ. ಆದದರಿಂದ, ನಾವು ಅದನ್ನು ಹೇಗೆ ಕಾಣಬೇಕು? ನಾವು ಕಡಿಮೆ ಭಾರಕ್ಕಾಗಿ ಕೇಳುತ್ತೇವೋ ಅಥವಾ ಬಲಿಷ್ಠ ಬೆನ್ನುಗಳನ್ನು ಕೊಡುವಂತೆ ಕೇಳಿಕೊಳ್ಳುತ್ತೇವೋ? ನಾವು ಆತನ ಮುಂದೆ ಮುನಿಸಿಕೊಂಡವರಾಗಿ ಬರುತ್ತೇವೋ ಅಥವಾ ಸಂತೋಷಿಸುವವರಾಗಿ ಬರುತ್ತೇವೋ? ಉಪದ್ರವಗಳ ಕುರಿತು ನಾವು ದೇವರ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವದಾದರೆ, ಅದು ನಮಗೆ ಇನ್ನಷ್ಟು ಬಲವಾದ ನಂಬಿಕೆಯನ್ನು ಹುಟ್ಟಿಸುವ ಒಂದು ಪರಿಸ್ಥಿತಿಯಾಗಿರುತ್ತದೆಂಬುದನ್ನು ಕಾಣುವದಕ್ಕೆ ಶಕ್ತರಾಗುತ್ತೇವೆ. EC

### ಆತನ ಬರೋಣದ ಅರ್ಥ (1:5-10)

ಪೌಲನು ಕ್ರಿಸ್ತನ ಬರೋಣದ ಕುರಿತಾದ ಚರ್ಚೆಯೊಳಗೆ ಪ್ರವೇಶಿಸುತ್ತಾ ಆತನ ಬರೋಣದ ಜೊತೆಗೆ ಹಿಂಸೆಯ ವಿಷಯವನ್ನು ಕೂಡಿಸುತ್ತಾನೆ. ಯೇಸುವಿನ ಬರೋಣದ ಕಾಲದಲ್ಲಿಯೇ ದೇವರು ತನ್ನ ಜನರನ್ನು ವಿರೋಧಿಸುವ ಜನರ ವಿಷಯದಲ್ಲಿ ಕ್ರಮವನ್ನು ಕೈಕೊಳ್ಳುವನು.

ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ಎರಡನೆಯ ಬರೋಣವನ್ನು ಮೂರು ಬೇರೆ ಬೇರೆ ನಾಮಪದಗಳ ಮೂಲಕ ಕರೆಯಲಾಗಿದ್ದು ಅವುಗಳನ್ನು "apocalypse" (ἀποκάλυψις,

*apokalupsis*), “parousia” (παρουσία, *parousia*), ಮತ್ತು “epiphany” (ἐπιφάνεια, *epiphaneia*) ಎಂಬ ಪದಗಳೊಂದಿಗೆ ಆಂಗ್ಲೀಕರಿಸಲಾಗಿರುತ್ತದೆ. “Apocalypse” ಎಂದರೆ ಮರೆಯಾಗಿಡಲ್ಪಟ್ಟದ್ದರ ಮುಸುಕನ್ನು ಎತ್ತುವದು ಅಥವಾ ಬಯಲುಗೊಳಿಸುವದು (1:7), ಅಥವಾ “parousia” ಎಂದರೆ “ಸನ್ನಿಧಿಯೊಳಗೆ ಬರುವದು” (1 ಥೆಸಲೋನಿಕ 2:19), ಮತ್ತು “epiphany” ಎಂದರೆ “ತೋರ್ಪಡಿಸಿಕೊಳ್ಳುವಿಕೆ” (2 ಥೆಸಲೋನಿಕ 2:8).

ಆತನ ಬರೋಣದ ವಿಷಯದಲ್ಲಿ ಇನ್ನಷ್ಟು ನೋಡೋಣ. ಯೇಸುವಿನ ಬರೋಣದಿಂದ ಏನೇನು ಆಗುವದು?

*ಒಂದು ಉಪಶಮನದ ಗಳಿಗೆ.* ಯೇಸುವಿನ ಬರೋಣವು ಹಿಂಸೆಯಿಂದ ಬಾಧೆಯನ್ನನುಭವಿಸುವವರಿಗೆ ಉಪಶಮನವನ್ನು ತರುವದು. ಆತನ ಬರೋಣದಲ್ಲಿ, ಎಲ್ಲಾ ಬಾಧೆಗಳು ಇತಿಹಾಸವಾಗಿ ಹೋಗುವವು, ಮತ್ತು ಕ್ರಿಸ್ತನ ಸಂಗಡ ಒಂದು ಮಹಿಮಾಕರವಾದ ಐಕ್ಯತೆಯು ಸಂಭವಿಸುವದು.

“ಉಪಶಮನ” ಎಂಬುದಕ್ಕಿರುವ ಗ್ರೀಕ್ ಪದವು ἄνεσις (*anesis*), ಮತ್ತು ಇದರರ್ಥವು ಒಬ್ಬನು ಬಿಗಿಯಾದ ಬಿಲ್ಲಿನ ತಂತಿಯನ್ನು ಕೆಳಕ್ಕೆ ಬಿಡುವ ರೀತಿಯಲ್ಲಿ, “ಒತ್ತಡದಿಂದ ಶಮನ” ಅಥವಾ “ಒತ್ತಡವನ್ನು ಸಡಿಲಗೊಳಿಸುವಿಕೆ” (ನೋಡಿರಿ 2 ಕೊರಿಂಥ 2:13; 7:5; 8:13).

*ಒಂದು ಪ್ರತೀಕಾರವನ್ನು ಮಾಡುವ ಗಳಿಗೆ.* ಕ್ರಿಸ್ತನ ಬರೋಣವು ಕರ್ತನನ್ನು ತಿರಸ್ಕರಿಸಿರುವವರಿಗೆ ಪ್ರತೀಕಾರವನ್ನು ಸಹ ತರುವಂತದ್ದಾಗಿದೆ. ಅವರು ಆತನ ಪ್ರಸನ್ನತೆಯಿಂದಲೂ ಆತನ ಹಿಂಬಾಲಕರ ಪ್ರಸನ್ನತೆಯಿಂದಲೂ ದೂರವಾಗಿ ಹಾಕಲ್ಪಡುವರು. ಅದು ಕರ್ತನು ಮುಯ್ಯಿ ತೀರಿಸುವ ಗಳಿಗೆಯಾಗಲಿದೆ.

ಆತನ ಬರೋಣದಲ್ಲಿ, ಲೋಕವು ಎರಡು ಗುಂಪುಗಳಾಗಿ ವಿಂಗಡಿಸಲ್ಪಡುವದು: ಆತನ ಬರೋಣದ ಮೂಲಕ ಸಂತೈಸಿಸಲ್ಪಡುವವರು ಮತ್ತು ಅದರ ಮೂಲಕ ನಾಶಗೊಳಿಸಲ್ಪಡುವವರು. ಎಲ್ಲಾ ಜನಾಂಗಗಳು ತನ್ನ ಮುಂದೆ ನಿಲ್ಲುವರು ಮತ್ತು ಅವರನ್ನು ನಾಶನದಲ್ಲಿರುವವರು ಮತ್ತು ರಕ್ಷಿಸಲ್ಪಟ್ಟವರು ಎಂಬದಾಗಿ ವಿಂಗಡಿಸಲಾಗುವದೆಂದು ಯೇಸು ಹೇಳಿದನು (ಮತ್ತಾಯ 25:31-46).   EC

## ಈ ನ್ಯಾಯವಾದ ತೀರ್ಪು ಮೇಲುಗೈಯಾಗುವದು (1:6, 7)

ಕ್ರಿಸ್ತನು ಹಿಂದಿರುಗಿ ಬಂದಾಗ, ದೇವರು ದೊಡ್ಡ ಅದಲುಬದಲು ಸಂಭವಿಸುವಂತೆ ಮಾಡುವನು. ಆತನು “ಸಂಕಟಪಡಿಸುವವರಿಗೆ ಪ್ರತಿಯಾಗಿ ಸಂಕಟವನ್ನೂ ಸಂಕಟಪಡುವವರಿಗೆ . . . ಉಪಶಮನವನ್ನೂ ಕೊಡುವನು” (ವಚನಗಳು 6, 7). ಈ ಕಾಲವು ಯಾವ ರೀತಿಯಲ್ಲಿರುವದು?

*ಅಲ್ಲೊಂದು ಪ್ರಕಟನೆ ಇರುವದು.* ಈಗ ಮರೆಯಾಗಿಡಲ್ಪಟ್ಟಿರುವದೆಲ್ಲವೂ ಆಗ ಪ್ರಕಟಗೊಳಿಸಲ್ಪಡುವದು. ಈಗ ನಾವು ಯೇಸುವನ್ನು ನೋಡುವದಕ್ಕೆ ಸಾಧ್ಯವಿಲ್ಲ, ಆದರೆ ಆಗ ನಾವು ಆತನನ್ನು ಕಾಣುವೆವು.

*ಯೇಸುವು ಆಕಾಶದೊಳಗಿಂದ ಪ್ರತ್ಯಕ್ಷನಾಗುವನು* (ವ. 7a). ಯೇಸುವು ಪರಲೋಕಾರೋಹಣಗೊಂಡ ವೇಳೆಯಲ್ಲಿ, ಶಿಷ್ಯರು ಅಲ್ಲಿ ಆಶ್ಚರ್ಯಚಕಿತರಾಗಿ ನಿಂತುಕೊಂಡಿದ್ದರು. ಆಗ ದೇವದೂತರು ಅವರಿಗೆ, "ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" (ಅಪೊಸ್ತಲರ ಕೃತ್ಯಗಳು 1:11). 1 ಥೆಸಲೋನಿಕ 1:10ರಲ್ಲಿ, ಪೌಲನು ಸಭೆಗೆ "ಆಕಾಶದೊಳಗಿಂದ ಬರುವಂಥ ಆತನ ಕುಮಾರನನ್ನು ಎದುರುನೋಡಿರಿ" ಎಂದು ಹೇಳಿದನು. ಕ್ರಿಸ್ತನು ಹಿಂದಿರುಗಿ ಬಂದಾಗ, ನಾವು ಆತನನ್ನು ಆಕಾಶದೊಳಗಿಂದ ಇಳಿದು ಬರುವದನ್ನು ಕಾಣುವೆವು.

*ಯೇಸುವು ತನ್ನ "ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರೊಡನೆ" ಇರುವನು* (ವ. 7b). ದೇವದೂತರು "ಪರಿಶುದ್ಧರು" (1 ಥೆಸಲೋನಿಕ 3:13; ನೋಡಿರಿ ಮಾರ್ಕ 8:38). ಪೌಲನು ಈ ದೇವದೂತರನ್ನು "ಶಕ್ತಿವಂತರು" ಎಂದು ಬಣ್ಣಿಸುತ್ತಾನೆ. ಸ್ಪಷ್ಟವಾಗಿರುವಂತೆ, ಸೇನಾನಾಯಕನಾದ ಕ್ರಿಸ್ತನು ಮತ್ತು ಶಕ್ತಿಶಾಲಿ ದೇವದೂತರು ಕೂಡಿದಾಗ, ಆ ಸೇನೆಯು ಅಪರಾಜೇಯವಾದದ್ದು.

*ಯೇಸುವು "ಉರಿಯುವ ಬೆಂಕಿಯಲ್ಲಿ" ಬರುವನು* (ವ. 7b). ದೇವರ ಪ್ರಸನ್ನತೆಯ ಜೊತೆಗೂಡಿ ಬೆಂಕಿಯು ಬರುವ ಪ್ರವೃತ್ತಿಯಿರುತ್ತದೆ. ವಿಮೋಚನಕಾಂಡ 3:2ರಲ್ಲಿ ಕರ್ತನು ಮೋಶೆಗೆ ಪ್ರತ್ಯಕ್ಷನಾದಾಗ, ಆತನು ಒಂದು ಉರಿಯುವ ಪೊದೆಯಲ್ಲಿ ಕಾಣಿಸಿಕೊಂಡನು. ಯೆಶಾಯ 66:15ನೇ ವಚನವು ಯೆಹೋವನು ನ್ಯಾಯತೀರಿಸುವದಕ್ಕೆ ಬೆಂಕಿಯಲ್ಲಿ ಬರುವನೆಂಬುದನ್ನು ಪ್ರಸ್ತಾಪಿಸುತ್ತದೆ: "ಆಹಾ ಯೆಹೋವನು ಬೆಂಕಿಯನ್ನು ಕಟ್ಟಿಕೊಂಡು ಬರುವನು; ಆತನ ರಥಗಳು ಬಿರುಗಾಳಿಯಂತಿರುವವು; ರೌದ್ರಾವೇಶದಿಂದ ತನ್ನ ಸಿಟ್ಟನ್ನು ತೀರಿಸುವನು, ಅಗ್ನಿಯ ಜ್ವಾಲೆಯಿಂದ ಖಂಡಿಸುವನು."

ಬೆಂಕಿಯಲ್ಲಿ ಎರಡು ಯೋಚನೆಗಳು ನೆಲೆಯಾಗಿರುತ್ತವೆ. ಮೊದಲನೆಯದು, ಅದು ವೈಭವದ ಒಂದು ಸಂಕೇತವಾಗಿರುತ್ತದೆ. ಅದು ಅರಸನೊಂದಿಗೆ ಬರುತ್ತದೆ. ಎರಡನೆಯದಾಗಿ, ಅದು ನ್ಯಾಯತೀರ್ಪನ್ನು, ಬಂಡಾಯಗಾರರ ವಿರುದ್ಧ ಪ್ರತೀಕಾರದ ನ್ಯಾಯತೀರಿಸುವಿಕೆಯನ್ನು ಸೂಚಿಸುತ್ತದೆ. ಯೆಶಾಯನು ಹೀಗೆ ಸಹ ಬರೆಯುತ್ತಾನೆ, "ಯೆಹೋವನು ಅಗ್ನಿಯಿಂದಲೂ . . . ನ್ಯಾಯತೀರಿಸುವನು." ಅಲ್ಲದೆ, ಮಲಾಕಿಯ 3:2ರಲ್ಲಿ ಯೆಹೋವನು ಬೆಳ್ಳಿಯನ್ನು ಶೋಧಿಸುವ ಅಕ್ಕಸಾಲಿಗನಿಗೆ ಹೋಲಿಸಲ್ಪಟ್ಟಿದ್ದಾನೆ. ಶೋಧಿಸುವ ಅಗ್ನಿಯು ಮಷ್ಟುವನ್ನ (ಕಲ್ಮಶ) ತೆಗೆದು ಹಾಕುವದು.

ಯೇಸುವು ಪುನಃ ಬರವಂಥ ಒಂದು ದಿನವು ಬರಲಿದೆ. ಆತನು ತನ್ನ ಪರಲೋಕದ ಸೇನೆಯೊಂದಿಗೆ ಇಳಿದು ಬರುವನು ಮತ್ತು ನ್ಯಾಯವಾದ ತೀರ್ಪನ್ನು ಬರಮಾಡುವನು. ದೇವರು ನ್ಯಾಯವಾದ ತೀರ್ಪು ಮಾಡುವ ದಿನವು ಭಕ್ತಿಯ ಜೀವಿತಗಳನ್ನು ನಡಿಸಿದವರಿಗೆ ಒಂದು ಮಹಿಮಾಕರವಾದ ದಿನವಾಗಿರಲಿದೆ. ಕ್ರಿಸ್ತನ ನಿಮಿತ್ತ ಬಾಧೆಗಳನ್ನನುಭವಿಸಿದವರು ಪರಲೋಕದ ತಮ್ಮ ಪ್ರತಿಫಲವನ್ನು ಪಡೆದುಕೊಳ್ಳುವರು. ಹೇಗೂ, ದೇವಜನರಿಗೆ ನೋವುಂಟು ಮಾಡಿದವರು ಶೋಧಿಸುವ ಅಗ್ನಿಯ ತೀಕ್ಷ್ಣತೆಯನ್ನು ಅನುಭವ ಮಾಡುವರು.

ಯೇಸು ಪುನಃ ಬರುವಾಗ, ಆತನಿಗೆ ನಮ್ಮಲ್ಲಿ ಏನು ಕಂಡು ಬರುವದು? ನಾವು ಆತನಿಂದ ಪ್ರತಿಫಲವನ್ನು ಹೊಂದುವೆವೋ ಅಥವಾ ನಾವು ದೇವರ ಕೋಪವನ್ನು ಅನುಭವಿಸುವೆವೋ? EE

## ಯೇಸು ಯಾವಾಗ ಬರುವನು (1:5-10)

ಪೌಲನು ಆ ಕ್ರೈಸ್ತರನ್ನು ಕ್ರಿಸ್ತನ ಎರಡನೆಯ ಬರೋಣದ ಶುಭವಾರ್ತೆಯ ಮೂಲಕ ಪ್ರೋತ್ಸಾಹ ಮಾಡುವವನಾಗಿ, ಆತನು ಹೊಸ ಒಡಂಬಡಿಕೆಯಲ್ಲಿಯೇ ಕ್ರಿಸ್ತನ ಪುನರಾಗಮನದ ಕುರಿತ ಅತ್ಯಂತ ಸ್ಫುಟವಾದ ಚಿತ್ರಣವನ್ನು ನೀಡುತ್ತಾನೆ. ಆತನ ಬರೋಣದಲ್ಲಿ ಆತನ ಜೊತೆಗೆ ಇರುವವರನ್ನು ಕುರಿತು, ಆತನು ಯಾವ ಸ್ಥಳದಲ್ಲಿ ಬರುತ್ತಾನೆ, ಮತ್ತು ಆತನ ಸುತ್ತಲು ಏನಿರುತ್ತದೆ ಎಂಬ ಕಾರ್ಯಗಳನ್ನು ಆತನು ಬಣ್ಣಿಸುತ್ತಾನೆ. ಆತನ ಬರೋಣವು ಒಂದು ಪ್ರಕಟನೆಯಾಗಿರಲಿದೆ, ಮರೆಯಾಗಿದ್ದಂಥ ಒಂದನ್ನು ಬಯಕುಗೊಳಿಸುವಂಥದ್ದಾಗಿರಲಿದೆ ಎಂದು ಪೌಲನು ಹೇಳುತ್ತಾನೆ. ಅದೊಂದು ಬಯಲಿಗೆ ತರುವಿಕೆ, ಒಂದು ಪ್ರಕಟಗೊಳಿಸುವಿಕೆ ಆಗಿರುವದು.

ಆತನ ಬರೋಣವು ಹೇಗಿರುವದೆಂಬುದಕ್ಕೆ ಈ ವಾಕ್ಯಭಾಗವು ನಮಗೊಂದು ಮಾನಸಿಕ ಚಿತ್ರಣವನ್ನು ಕೊಡುತ್ತದೆ.

*ಆತನು ಆಕಾಶದಿಂದ ಇಳಿದು ಬರುವನು*. ಬರಲಿರುವವನು ಯೇಸುವೇ, ದೇವತ್ವವಾದವನು. ಆತನ ಭೂಲೋಕದ ಸೇವೆಯ ಅಂತ್ಯದ ವೇಳೆಯಲ್ಲಿ, ಆತನು ಪುನಃ ಪರಲೋಕಕ್ಕೆ ಆರೋಹಣಗೊಂಡಿದ್ದನು (ಅಪೊಸ್ತಲರ ಕೃತ್ಯಗಳು 1:11), ಮತ್ತು ಆತನು ಕ್ರೈಸ್ತ ಯುಗದ ಅಂತ್ಯದ ವೇಳೆಯಲ್ಲಿ ಆಕಾಶದಿಂದ ಇಳಿದು ಬರುವನು. ಬರಲಿರುವಾತನು ಈಗ ದೇವರ ಬಲಗಡೆಯಲ್ಲಿ ಕುಳಿತಿರುವಾತನೇ ಆಗಿದ್ದಾನೆ.

*ಆತನು ಶಕ್ತಿಶಾಲಿ ದೇವದೂತರೊಂದಿಗೆ ಬರುವನು*. ಯೇಸುವು ಏಕಾಂಗಿಯಾಗಿ ಬರುವದಿಲ್ಲ. ಆತನೊಂದಿಗೆ ದೇವದೂತರ ಸಮೂಹ ಬರುವದು, ಮತ್ತು ಅವರು ಭೂಲೋಕದವರಿಗೆಲ್ಲಾ ನ್ಯಾಯತೀರಿಸುವ ಕಾರ್ಯದಲ್ಲಿ ಆತನಿಗೆ ಸಹಾಯವನ್ನು ಮಾಡುವವರಾಗಿ ಆತನ ಶಕ್ತಿಯನ್ನು ಪ್ರಕಾಶಿಸುತ್ತಿರುವರು (ಮತ್ತಾಯ 25:31-33). ದೇವದೂತರ ಪಾತ್ರವು ದ್ವಿತಿಯವಾಗಿರುವದು; ಅವರು ಕರ್ತನಿಗೆ ಸಹಾಯಕರಾಗಿ ಸೇವೆ ಮಾಡುವರು.

ಅವರು ತಮಗೆ ಹೇಳಲ್ಪಡುವದನ್ನು ಮಾಡುವದಕ್ಕೆ ಶಕ್ತರಾಗಬೇಕೆಂದರೆ ಅವರು *ಶಕ್ತಿಶಾಲಿ* ದೇವದೂತರಾಗಿರಬೇಕಾಗುತ್ತದೆ: ನಿತ್ಯವಾದ ನ್ಯಾಯತೀರ್ಪನ್ನು ಜಾರಿಗೆ ತರುವದರಲ್ಲಿ ಅವರು ಕರ್ತನಿಗೆ ಸಹಾಯಕರಾಗಿರುವರು. ಈ ದೇವದೂತರು ಕ್ರಿಸ್ತನ ಶಕ್ತಿಯನ್ನು ತೋರ್ಪಡಿಸುವರು, ಮತ್ತು ಅವರು ಆತನ ಘನತೆ ಹಾಗೂ ದೇವತ್ವವನ್ನು ಪ್ರಕಟಗೊಳಿಸುವರು. ಅವರು ಕರ್ತನಿಂದ ತಮಗೆ ಕೊಡಲ್ಪಟ್ಟ ಶಕ್ತಿಯ ಮೂಲಕ ಆತನು ಹೇಳಿದ್ದನ್ನೆಲ್ಲಾ ಮಾಡುವದಕ್ಕೆ ವೇಗವಾಗಿ ಸಾಗುವರು. ತಮ್ಮ ಪಾತ್ರಗಳನ್ನು ನೆರವೇರಿಸುವದರಲ್ಲಿ ಅವರು ಆತನ ಅತಿಶಯವಾದ ಮಹಿಮೆಯನ್ನು ಪ್ರತಿಬಿಂಬಿಸುವರು.

*ಆತನು ಉರಿಯುವ ಬೆಂಕಿಯಲ್ಲಿ ಬರುವನು*. ಆತನ ಮಹಿಮೆ ಮತ್ತು ವೈಭವಗಳು

ಬೆಂಕಿಯಿಂದ ವ್ಯಕ್ತಗೊಳಿಸಲ್ಪಡುವವು. ಬಹುಶಃ ಆತನು ಅಗ್ನಿಯ ಉಡುಪಿನಿಂದ ಕೂಡಿರುವನು, ಅಥವಾ ಬಹುಶಃ ಆತನ ಸುತ್ತಲು ಅಗ್ನಿಮಯವಾದ ಮೇಘಗಳು ಇರುವವು.

*ಆತನು ನಿತ್ಯನಾದ ನ್ಯಾಯಾಧಿಪತಿಯಾಗಿ ಬರುವನು.* ಆತನು ಬರುವದಕ್ಕೆ ಇರುವಂಥ ಉದ್ದೇಶಗಳಲ್ಲೊಂದು ಎಂದರೆ ಕರ್ತನ ಜ್ಞಾನವನ್ನು ನಿರಾಕರಿಸಿದ ಮತ್ತು ತನ್ನ ಸುವಾರ್ತೆಗೆ ವಿಧೇಯರಾಗುವದನ್ನು ತಿರಸ್ಕರಿಸಿದವರಿಗೆ ಪ್ರತೀಕಾರವನ್ನು ಸಲ್ಲಿಸುವದೇ ಆಗಿರುತ್ತದೆ.

ಸುವಾರ್ತೆಯು ಮಾಹಿತಿ, ಒಂದು ಕಥೆ, ಅಥವಾ ಸಲಹೆ ಎಂಬುದಕ್ಕಿಂತಲೂ ಹೆಚ್ಚಿನದ್ದಾಗಿಯೆಂಬುದನ್ನು ಗಮನಿಸತಕ್ಕದ್ದು. ಅದು ಒಂದು ಆಜ್ಞೆಯ ಸ್ವಭಾವವನ್ನು ಹೊಂದಿದೆ. ಅದಕ್ಕೆ ವಿಧೇಯರಾಗತಕ್ಕದ್ದು.

ದುಷ್ಟರಿಗೆ ದಂಡನೆಯನ್ನು ಕೊಡುವದು ಕರ್ತನ ಬರೋಣದ ಮುಖ್ಯ ಉದ್ದೇಶವಾಗಿರದು. ಆತನು ಪ್ರಮುಖವಾಗಿ ತನ್ನವರನ್ನು ಕರೆದೊಯ್ಯುವದಕ್ಕೆ ಬರುವನು. ಆತನನ್ನು ತಿರಸ್ಕರಿಸಿದವರಿಗೆ ನ್ಯಾಯತೀರ್ಪು ಮಾಡಲ್ಪಡುವದು ರಕ್ಷಿಸಲ್ಪಟ್ಟವರನ್ನು ನಿತ್ಯವಾಗಿ ವಿಮೋಚಿಸುವ ಮುಖ್ಯ ಉದ್ದೇಶದ ನಂತರದಲ್ಲಿ ಬರುವಂಥದ್ದು. ಆತನ ಬರೋಣವು ಈ ಕ್ರೈಸ್ತ ಯುಗವನ್ನು ಅಂತಿಮಗೊಳಿಸುವದು. ಆತನ ಪುನರಾಗಮನದ ಬಳಿಕ ನಿತ್ಯತ್ವವು ಇರುವದು. ಬೈಬಲ್ ನ್ನು ಮೂರು ಪದಗುಚ್ಛಗಳಲ್ಲಿ ಸಾರಾಂಶಿಸಬಹುದಾಗಿದೆ: "ಆತನು ಬರುತ್ತಿದ್ದಾನೆ; ಆತನು ಬಂದಿದ್ದಾನೆ; ಆತನು ಹಿಂದಿರುಗಿ ಬರುತ್ತಿದ್ದಾನೆ."

ಥೆಸಲೋನಿಕದವರು ಕ್ರಿಸ್ತನ ಪುನರಾಗಮನವನ್ನು ಅದರ ಎಲ್ಲಾ ಸ್ಪಷ್ಟತೆಯಲ್ಲಿ ನೋಡಬೇಕೆಂಬುದು ಪೌಲನ ಬಯಕೆಯಾಗಿತ್ತು, ಯಾಕೆಂದರೆ ಅಂಥ ಚಿತ್ರಣವು ಅವರಿಗೆ ಪ್ರೋತ್ಸಾಹ ಮತ್ತು ಆದರಣೆಯನ್ನುಂಟು ಮಾಡುವದಾಗಿತ್ತು. ನಾವು ಆತನ ಪುನರಾಗಮನವನ್ನು ಹೇಗೆ ನೋಡುತ್ತೇವೆ? EC

## ವಿಧೇಯರ ಭವಿಷ್ಯತ್ತು (1:10)

ಅವಿಧೇಯವರು ಏನನ್ನು ಅನುಭವಿಸುವರೆಂಬುದನ್ನು ತಿಳಿಸಿದವನಾಗಿ, ಪೌಲನು ನೀತಿವಂತರ ಭವಿಷ್ಯದ ಕುರಿತ ಚಿತ್ರಣದ ಕಡೆಗೆ ತಿರುಗಿಕೊಳ್ಳುತ್ತಾನೆ. ವಿಮೋಚಿಸಲ್ಪಟ್ಟವರಿಗೆ ಎರಡನೆಯ ಬರೋಣವು ಹೇಗಿರುವದು?

*ಅವರು ಕರ್ತನನ್ನು ಮಹಿಮೆ ಪಡಿಸುವರು.* ಯೇಸುವು ಮಹಿಮೆಗೊಳಿಸಲ್ಪಡುವನು, ಬೇರೆಯವರಿಂದ ಆಶ್ಚರ್ಯಕ್ಕೊಳಪಡುವನು, ಮತ್ತು ಆತನು ನಿತ್ಯವಾದ ನಿವಾಸಕ್ಕೋಸ್ಕರ ಒಟ್ಟುಗೂಡಿಸುವಾಗ ವಿಮೋಚಿಸಲ್ಪಟ್ಟವರು ಆತನನ್ನು ಸ್ತುತಿಸುವರು. "ಮಹಿಮೆ ಉಂಟಾಗುವದು" ಎಂಬ ಕ್ರಿಯಾಪದಕ್ಕೆ ಮುಂಚೆ "ದಲ್ಲಿ" ಎಂಬ ಉಪಸರ್ಗವು ಸೇರಿಸಲ್ಪಟ್ಟಿದೆ, ಅಲ್ಲದೆ ಕ್ರಿಯಾಪದದ ಬಳಿಕ ಒಂಟಿಯಾಗಿ ನಿಂತಿರುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಕರ್ತನ ಮಹಿಮೆಯು ದೇವಜನರಲ್ಲಿ ಪ್ರತಿಫಲನಗೊಳ್ಳುವದೆಂಬ ಆಶ್ಚರ್ಯಚಕಿತವಾದ ಹೇಳಿಕೆಯನ್ನು ಪೌಲನು ನೀಡುತ್ತಿದ್ದಾನೆ (ಯೋಹಾನ 17:1; ಎಫೆಸ 2:7 ರೊಂದಿಗೆ ಹೋಲಿಸಿರಿ). ಬೇರೆ ಮಾತುಗಳಲ್ಲಿ ಹೇಳುವದಾದರೆ, ವಿಮೋಚಿಸಲ್ಪಟ್ಟವರು, ತಾವು ಯಾರಾಗಿದ್ದಾರೆಂಬುದರಲ್ಲಿ-ರಕ್ತದಿಂದ

ವಿಮೋಚಿಸಲ್ಪಟ್ಟವರು-ಕರ್ತನ ಮಹಿಮೆಯನ್ನು ತೋರ್ಪಡಿಸುವರು.

*ಅವರು ಕರ್ತನ ಮಹಿಮೆಯಲ್ಲಿ ಪಾಲುಗಾರರಾಗುವರು.* ಯೇಸು ತನ್ನ ಮಹಿಮೆಯನ್ನು ವಿಮೋಚಿಸಲ್ಪಟ್ಟವರೊಂದಿಗೆ ಹಂಚಿಕೊಳ್ಳುವನು. ನಾವು ಹಿಂಬಾಲಿಸಿರುವ ಕರ್ತನ ಮಹಿಮೆಯನ್ನು ಧರಿಸಿಕೊಳ್ಳುವೆವು. ಬೇರೆ ಸ್ಥಳಗಳಲ್ಲಿಮ ಪೌಲನು ಕ್ರೈಸ್ತರಲ್ಲಿ ಪ್ರಕಟಗೊಳ್ಳುವ ಮಹಿಮೆಯ ಕುರಿತಾಗಿ ಮಾತಾಡುತ್ತಾನೆ (ರೋಮಾ 8:18; ಕೊಲೊಸ್ಸೆ 3:4; ನೋಡಿರಿ 1 ಪೇತ್ರ 4:13). ಆತನು ಕ್ರೈಸ್ತರನ್ನು ಈಗಾಗಲೆ ಈ ಜೀವನದಲ್ಲಿ ಕರ್ತನ ಮಹಿಮೆಯಲ್ಲಿ ಪಾಲುಗಾರರಾಗಿರುವವರೆಂದು, ಮತ್ತು ಕ್ರಿಸ್ತನೊಂದಿಗಿನ ತಮ್ಮ ಸಂಬಂಧದಲ್ಲಿ ಕ್ರಿಸ್ತನ ಮಹಿಮೆಯೊಳಗೆ ಬೆಳೆಯುತ್ತಿರುವವರಂತೆ ಕಂಡನು (2 ಕೊರಿಂಥ 3:15-18; 4:4-6). ಆತನು ಬರುವ ವೇಳೆ, ಅವರು ಇನ್ನೂ ಹೆಚ್ಚಾಗಿ ಆತನ ಮಹಿಮೆಯನ್ನು ಪಡೆದುಕೊಳ್ಳುವರು.

*ಅವರು ತಮ್ಮ ನಂಬಿಕೆಯ ನೆರವೇರಿಕೆಯನ್ನು ಅನುಭವಿಸುವರು.* ನಮ್ಮ ನಂಬಿಕೆಯು ಒಂದು ಅಂತ್ಯವನ್ನು, ಒಂದು ಪೂರ್ಣಗೊಳ್ಳುವಿಕೆಯನ್ನು ಎದುರು ನೋಡುತ್ತಿದೆ. ಪೌಲನು ಹೇಳಿದ ಸಾಕ್ಷಿಯು ಅಂಗೀಕರಿಸಲ್ಪಟ್ಟಿತು, ನಂಬಲ್ಪಟ್ಟಿತು, ಮತ್ತು ಅವರು ಆ ಸಾಕ್ಷಿಯನ್ನು ಅಂಗೀಕರಿಸಿಕೊಂಡದ್ದು ಆತನ ಬರೋಣದಲ್ಲಿ ಪೂರ್ಣಗೊಳಿಸಲ್ಪಡುವದು.

*ಅವರು ತಮ್ಮ ನಿತ್ಯನಿವಾಸಗಳನ್ನು ಪ್ರವೇಶಿಸುವರು.* ಪೌಲನು ಈ ವಚನಗಳಲ್ಲಿ ಯುಗಗಳ ಪರಾಕಾಷ್ಠೆಯನ್ನು, ದೇವರ ನಿತ್ಯವಾದ ಉದ್ದೇಶವು ಯಾವಾಗಲೂ ನೋಡುತ್ತಿದ್ದ ಕೈಗೂಡುವದರ ಕುರಿತಾಗಿ ಮಾತಾಡುತ್ತಾನೆ.

ಕ್ರೈಸ್ತನು ದೇವರ ಯೋಜನೆಯ ಅಂತಿಮ, ಮಹಿಮಾಕರವಾದ ಭಾಗವನ್ನು ಅನುಭವಿಸುವನು. ದೇವರು ಮಾಡಿರುವದೆಲ್ಲವೂ ಈ ಘಟನೆಯನ್ನು ದೃಷ್ಟಿಯಲ್ಲಿಟ್ಟುಕೊಂಡದ್ದಾಗಿತ್ತು. ನಾವು ದೇವರ ಕೈಕೆಲಸವನ್ನು ಆಕಾಶಗಳಲ್ಲಿ, ನಮ್ಮ ಸುತ್ತಲಿನ ಪ್ರಕೃತಿ ಜಗತ್ತಿನಲ್ಲಿ, ಮತ್ತು ಮಾನವ ಜೀವಿಗಳಲ್ಲಿ ಕಂಡಿದ್ದೇವೆ; ಆದರೆ ಆತನ ಎಲ್ಲಾ ಯೋಜನೆಯ ನೆರವೇರಿಕೆಯು ಹೇಗಿರುವದೆಂಬುದನ್ನು ನೀವು ಊಹಿಸಿಕೊಳ್ಳಬಲ್ಲಿರೋ? EC

## ಅವಿಧೇಯರ ಅಂತ್ಯಸ್ಥಿತಿ (1:8-10)

ಕ್ರಿಸ್ತನ ಬರೋಣದ ವೇಳೆ ಅವಿಧೇಯರಿಗೆ ಏನು ಸಂಭವಿಸುವದೆಂಬುದರ ಕುರಿತು ಕಣ್ಣಿಗೆ ಕಟ್ಟಿದಂತೆ ವಿವರಿಸಲಾಗಿದೆ. ಅವಿಧೇಯರೊಳಗೆ ದೇವರ ಜ್ಞಾನವನ್ನು ತಮ್ಮ ಮನಸ್ಸಿನಿಂದ ಹೊರಗೆ ದೊಬ್ಬಿರುವದರಿಂದ ದೇವರನ್ನು ಅರಿಯದವರು ಮತ್ತು ಸುವಾರ್ತೆಗೆ ವಿಧೆಯರಾಗಬಾರದೆಂದು ತೀರ್ಮಾನಿಸಿಕೊಂಡಿರುವವರು ಸೇರಿರುತ್ತಾರೆ. ಈ ಜನರು ಕರ್ತನ ಪ್ರತೀಕಾರದ ಹೊಡೆತವನ್ನು ಪಡೆಯುವರು.

*ಅವರು ದಂಡನೆಯನ್ನು ಅನುಭವಿಸುವರು.* ಅವುಗಳು ನಿತ್ಯವಾದ ದುರ್ಗತಿಯನ್ನು ಮುಂತಿಳಿಸುವ ಸರಳವಾದ ಮಾತುಗಳಾಗಿವೆ. ಕ್ರೈಸ್ತರನ್ನು ಹಿಂಸಿಸಿದವರಾದರೋ, ತಾವು ಮಾಡಿದ ಪ್ರಕಾರವೇ ಅವರು ಹೊಂದಿಕೊಳ್ಳುವರು. ಅವರು ಉಪದ್ರವವನ್ನು ನೀಡಿದರು; ಆತನ ಬರೋಣದಲ್ಲಿ, ಅವರು ಅದನ್ನು ಪಡೆದುಕೊಳ್ಳುವರು.

*ಅವರು ನಿತ್ಯವಾದ ದಂಡನೆಯನ್ನು ಅನುಭವಿಸುವರು.* "ನಿತ್ಯವಾದ" ಎಂಬುದರ ಮೇಲೆ ಒತ್ತು ಕೊಡತಕ್ಕದ್ದು. ಅದು ದೇವರಿಂದ ಮುಂದುವರೆಯುವಂಥ, ನಿರಂತರವಾದ ಅಗಲುವಿಕೆಯಾಗಿರುವದು. ದಂಡನೆಯನ್ನು "ನಾಶನ" ಎಂದು ಬಣ್ಣಿಸಲಾಗಿದೆ. ಇಲ್ಲಿ ಬಳಸಲಾಗಿರುವ ಪದದಲ್ಲಿ ಅಸ್ತಿತ್ವದಲ್ಲಿ ಇಲ್ಲದೆ ಹೋಗುವರು ಎಂಬ ಯೋಚನೆಯು ಇರುವದಿಲ್ಲ. "ನಿತ್ಯನಾಶನ" ಎಂಬ ಪದಗುಚ್ಛವು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, ಅದು ನಿತ್ಯಜೀವಕ್ಕೆ ಸರಿಯಾಗಿ ತದ್ವಿರುದ್ಧವಾಗಿರುತ್ತದೆ.

*ಅವರು ದೇವರ ಸನ್ನಿಧಿಯಿಂದ ದೂರವಾಗಿ ನಿತ್ಯವಾದ ನಾಶನವನ್ನು ಅನುಭವಿಸುವರು.* ಕರ್ತನ ಸಮ್ಮುಖದಿಂದ ಮತ್ತು ಆತನ ಶಕ್ತಿಪ್ರಭಾವದ ಕಡೆಯಿಂದ ಗಡಿಪಾಡು ಮಾಡಲ್ಪಡುವದು ಹೇಗಿರುವದೆಂಬದನ್ನು ಮಾನವರು ಗ್ರಹಿಸಿಕೊಳ್ಳಲಾರರು. ನೀತಿವಂತರು ಕರ್ತನ ಸಂಗಡ ಅನ್ಯೋನ್ಯತೆಯೊಳಗೆ ಪ್ರವೇಶಿಸುವರು, ಮತ್ತು ಅನೀತಿವಂತರು ಆ ನೀತಿಯೊಳಗಿಂದ ಹೊರಗೆ ಶಾಶ್ವತವಾಗಿ ಕಳುಹಿಸಲ್ಪಡುವರು.

ಕೆಲವು ಬಂದರುಗಳು ವರ್ಷಪೂರ್ತಿ ಕಾರ್ಯಮಾಡುವವು. ಇನ್ನು ಕೆಲವು ಬಂದರುಗಳು ಚಳಿಗಾಲದಲ್ಲಿ ಮಂಜುಗಡ್ಡೆಯಿಂದ ಆವೃತಗೊಂಡಿರುವವು. Montreal, Canadaದಂತಹ ಬಂದರುಗಳಲ್ಲಿ, ಅಧಿಕಾರಿಗಳು ಮಂಜುಗಟ್ಟುವದು ಸನ್ನಿಹಿತವಾದ ವೇಳೆಯಲ್ಲಿ ತನ್ನ ಹಡಗುನ್ನು ಬಂದರಿನಿಂದ ದೂರಕ್ಕೆ ಒಯ್ಯುವಂತೆ ಹಡಗಿನ ಕ್ಯಾಪ್ಟನ್ ನ್ನು ಬೇಡಿಕೊಳ್ಳುವರು. ಆತನು ಆಲಸ್ಯಮಾಡುವದಾದರೆ, ಆತನಿಗೆ ಅಲ್ಲಿಂದ ಹೊರಡುವದಕ್ಕಾಗುವದಿಲ್ಲ. ಸಾಧ್ಯವಿರುವಾಗಲೇ ಅಲ್ಲಿಂದ ದೂರಕ್ಕೆ ಹೋಗುವದಕ್ಕೆ ಇದ್ದಂಥ ಸದವಕಾಶವನ್ನು ಬಳಸಿಕೊಳ್ಳದೆ ಹೋದ ಕಾರಣದಿಂದ, ಆತನು ತನಗೆ ಯೋಗ್ಯವಾದದ್ದನ್ನೇ ಅನುಭವಿಸುವನು. ಆದುದರಿಂದ, ನಿತ್ಯವಾದ ದಂಡನೆಯು ಎರಡು ವಾಸ್ತವಾಂಶಗಳನ್ನು ಗುರುತಿಸುತ್ತದೆ: ದೇವರ ದೀರ್ಘಶಾಂತಿಯು ಸದಾಕಾಲವೂ ಇರದು, ಮತ್ತು ಪಶ್ಚಾತ್ತಾಪ ಪಡುವದಕ್ಕೆ ಮನುಷ್ಯನಿಗಿರುವ ಸದವಕಾಶವು ಮೀತಿಯುಳ್ಳದ್ದಾಗಿದೆ.[14]

ಇಡೀ ದೇವರ ವಾಕ್ಯದಲ್ಲಿಯೇ ಇದಕ್ಕಿಂತ ಶಾಸ್ತ್ರೋಕ್ತವಾದ ಚಿತ್ರಣವು ಬೇರೆ ಯಾವದೂ ಇಲ್ಲ. ದೇವರಿಂದ ನಿತ್ಯವಾಗಿ ಅಗಲಿಸುವಿಕೆ ಅತ್ಯಂಥ ದುರಂತಕರವಾದದ್ದರಿಂದ ಶಿಲುಬೆಯು ಭಯಂಕರವಾಗಿತ್ತು. ಅಂತ್ಯದಲ್ಲಿ, ತಮ್ಮ ರಕ್ಷಣೆಯ ಏಕೈಕ ದಾರಿಯಾದ ಸುವಾರ್ತೆಯನ್ನು ತಿರಸ್ಕರಿಸಿದವರನ್ನು ದೇವರು ಸಹ ತಿರಸ್ಕರಿಸಬೇಕಾಗುತ್ತದೆ. EC

## ಒಬ್ಬರಿಗೊಬ್ಬರು ಪ್ರಾರ್ಥನೆ ಮಾಡಿಕೊಳ್ಳುವದು (1:11, 12)

ಪೌಲನು ಪ್ರಾರ್ಥನೆಯಲ್ಲಿ ನಡಿಸುವವನಾಗಿ ಪ್ರಾರ್ಥಿಸುತ್ತಿರುವ ವೇಳೆ ಆತನೊಂದಿಗೆ ಕೂಡಿಕೊಂಡು ನಿಮ್ಮ ಶಿರಗಳನ್ನು ಬಾಗಿಸಿ ಆತನ ಮಾತುಗಳನ್ನು ಕೇಳಿಸಿಕೊಳ್ಳುವದು ಹೇಗಿರುತ್ತಿತ್ತೆಂಬುದನ್ನು ಊಹಿಸಿಕೊಳ್ಳಿರಿ. ಅದು ಎಂಥ ಒಂದು ಶ್ಲಾಘ್ಯವಾಗಿರುತ್ತಿತ್ತು! ಮುಂದಿನ ಉತ್ತಮ ಕಾರ್ಯವೆಂದರೆ ಆತನು ಪ್ರಾರ್ಥಿಸುತ್ತಾ ನುಡಿದ ಮಾತುಗಳಲ್ಲಿ ಗಮನಿಸುವದು ಆಗಿರುತ್ತದೆ.

ಈ ಎರಡು ವಚನಗಳಲ್ಲಿ, ತಾನು ಥೆಸಲೋನಿಕದವರಿಗೋಸ್ಕರ ಪ್ರಾರ್ಥನೆ ಮಾಡುತ್ತಿದ್ದೇನೆಂದು ಆತನು ಹೇಳುತ್ತಾನೆ. ಆತನು ನಿರಂತರವಾಗಿ ಅವರಿಗೋಸ್ಕರ ಒಂದು

ವಿಶೇಷವಾದ ಪ್ರಾರ್ಥನೆಯನ್ನು ಮಾಡುತ್ತಿದ್ದನು. ಆತನು ಅವರಿಗೋಸ್ಕರ ಹೀಗೆ ನಿರಂತರವಾಗಿ ಪ್ರಾರ್ಥಿಸುತ್ತಿರಬೇಕಾದರೆ, ಅದೊಂದು ಪ್ರಾಮುಖ್ಯವಾದ ಪ್ರಾರ್ಥನೆ ಆಗಿರಬೇಕು. ಆತನು ತಾನು ಮಾಡುವದಕ್ಕೆ ಸಾಧ್ಯವಾದ ಅತ್ಯಂಥ ಶ್ರೇಷ್ಠವಾದ ವಿಜ್ಞಾಪನೆಯನ್ನು ಮಾಡುತ್ತಿದ್ದಾನೆ. ನಿಶ್ಚಯವಾಗಿಯೂ ಇವುಗಳು ನಾವು ಒಬ್ಬರಿಗೊಬ್ಬರು ಸಲ್ಲಿಸುವ ಅಗತ್ಯವಿರುವಂಥ ಮೊರೆಗಳಾಗಿರುತ್ತವೆ.

*ನಮ್ಮ ಸಹೋದರರು ತಮ್ಮ ಕರೆಯುವಿಕೆಗೆ ಯೋಗ್ಯರಾಗಿರುವಂತಾಗುವ ಹಾಗೆ.* ಥೆಸಲೋನಿಕದವರು ಕ್ರೈಸ್ತರಾದ ವೇಳೆಯಲ್ಲಿ ಪಡೆದುಕೊಂಡ ಅವರ ಕರೆಯುವಿಕೆಯಲ್ಲಿ ದೇವರು ಅವರನ್ನು ಯೋಗ್ಯರೆಂದು ಎಣಿಸಬೇಕೆಂದು ಪೌಲನು ಪ್ರಾರ್ಥಿಸಿದನು. ಅವರು ಸುವಾರ್ತೆಯ ಮೂಲಕ ವಿಮೋಚಿಸಲ್ಪಟ್ಟ ಗಣ್ಯತೆಯ ಜೀವನವನ್ನು ನಡಿಸುವದಕ್ಕೆ ಕರೆಯಲ್ಪಟ್ಟಿದ್ದರು. ಅವರು ಆ ಕರೆಯುವಿಕೆಯೊಂದಿಗೆ ಸಾಮರಸ್ಯದಲ್ಲಿ ಜೀವಿಬೇಕೆಂಬದು ಪೌಲನ ಬಯಕೆಯಾಗಿತ್ತು. ನಮ್ಮ ಸಹೋದರರಿಗೋಸ್ಕರ ನಮ್ಮ ಪ್ರಾರ್ಥನೆಯು ಅದೇ ರೀತಿಯದ್ದಾಗಿರಬೇಕು.

*ನಮ್ಮ ಸಹೋದರರ ನಂಬಿಕೆಯಿಂದುಂಟಾದ-ಮನವಿಗಳು ನೆರವೇರಿಸಲ್ಪಡುವ ಹಾಗೆ.* ದೇವರು ಅವರ ಪ್ರತಿಯೊಂದು ಉದಾತ್ತವಾದ ಆಕಾಂಕ್ಷೆಗಳನ್ನು ನೆರವೇರಿಸಲೆಂದು ಪೌಲನು ಪ್ರಾರ್ಥಿಸಿದನು. ಇಲ್ಲಿ ಉಲ್ಲೇಖವು ದೇವರ ಒಳ್ಳೇತನದ ಕುರಿತಾದದ್ದಲ್ಲ ಆದರೆ ಥೆಸಲೋನಿಕದವರ ಒಳ್ಳೇತನ ಕುರಿತಾಗಿರುತ್ತದೆ. ಉಪವಾಕ್ಯವನ್ನು ಹೀಗೆ ಅನುವಾದಿಸಬಹುದು, “ಮತ್ತು ಒಳ್ಳೇದನ್ನು ಮಾಡಬೇಕೆಂಬ ಸಕಲ ಒಳ್ಳೇ ನಿರ್ಧಾರಗಳನ್ನು ನೆರವೇರಿಸು.” ಒಳ್ಳೇತನದ ಸಕಲ ಬಯಕೆಗಳು ಮತ್ತು ನಂಬಿಕೆಯ ಸಕಲ ಕೆಲಸಗಳು ದೇವರ ಶಕ್ತಿಯಲ್ಲಿ ಉತ್ತರಿಸಲ್ಪಡಬೇಕು ಎಂದು ಆತನು ಬಯಸಿದನು.

ದೇವರಿಗೆ ಮಾಡುವ ಈ ಪವಿತ್ರವಾದ ಮನವಿಯಲ್ಲಿ ಒಳ್ಳೇತನ, ನಂಬಿಕೆ, ಮತ್ತು ದೇವರ ಶಕ್ತಿ ಇವುಗಳು ಒಂದಾಗಿ ಸಮ್ಮಿಲನವಾಗಿರುವದನ್ನು ಕಾಣುತ್ತೇವೆ. ಈ ವಿಧವಾದ ಬೇಡಿಕೊಳ್ಳುವಿಕೆಯು ಅವರಲ್ಲಿ ದೇವರು ತನ್ನ ದೈವಿಕ ಉದ್ದೇಶಗಳನ್ನು ನೆರವೇರಿಸುವದಕ್ಕೆ ಕಾರ್ಯಮಾಡುತ್ತಿದ್ದಾನೆಂಬದನ್ನು, ಮತ್ತು ವಾಸ್ತವದಲ್ಲಿ ಆತನು ತನ್ನ ಜನರ ಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆ ಎಂಬುದನ್ನು ಊಹಿಸಿಕೊಳ್ಳುವದಾಗಿದೆ.

*ಅವರ ಮೂಲಕವಾಗಿ ಕ್ರಿಸ್ತನು ಮಹಿಮೆ ಹೊಂದುವಂತಾಗುವ ಹಾಗೆ.* ಕ್ರಿಸ್ತನು ಥೆಸಲೋನಿಕದವರ ಮೂಲಕ ಮಹಿಮೆಯನ್ನು ಹೊಂದುವಂತಾಗಬೇಕೆಂದು ಮತ್ತು ಆವರು ಆತನ ಮಹಿಮೆಯಲ್ಲಿ ಪಾಲುಗಾರರಾಗುವಂತಾಗಲಿ ಎಂದು ಪೌಲನು ಪ್ರಾರ್ಥಿಸಿದನು. ಖಂಡಿತವಾಗಿಯೂ “ಹೆಸರಿಗೆ” ಎಂಬುದು ಇಡೀ ವ್ಯಕ್ತಿಯನ್ನು ಸೂಚಿಸುವದಾಗಿದೆ, ಹೀಗೆ “ಕರ್ತನ ಹೆಸರ”ನ್ನು ಮಹಿಮೆಪಡಿಸುವದೆಂದರೆ ಕರ್ತನ ವ್ಯಕ್ತಿತ್ವವು ಹೇಗಿರುತ್ತದೆಂಬುದನ್ನು ಲೋಕಕ್ಕೆ ತೋರಿಸಿ ಕೊಡುವದಾಗಿದೆ. ಕ್ರಿಸ್ತನ ಮಹಿಮೆಯು ಎರಡು ದಿಕ್ಕುಗಳಲ್ಲಿ ಸಾಗುವದನ್ನು ಪೌಲನು ಕಂಡನು-ಕ್ರೈಸ್ತರು ಕ್ರಿಸ್ತನಿಗೆ ಮಹಿಮೆಯನ್ನು ಸಲ್ಲಿಸುವದು, ಅದೇ ವೇಳೆಯಲ್ಲಿ ಅವರು ಆತನಿಗೋಸ್ಕರ ಜೀವಿಸುವವರಾಗಿ ಆತನ ಮಹಿಮೆಯಲ್ಲಿ ಪಾಲುಗಾರರಾಗುವರು.

ಇದು ಎಂಥ ಅರ್ಥಪೂರ್ಣವಾದ ಪ್ರಾರ್ಥನೆ! ಇದರಲ್ಲಿ ಆತ್ಮೀಕ

ಸತ್ವಗಳನ್ನೊಳಗೊಂಡಿರುತ್ತದೆ: ಯೋಗ್ಯವಾದ ನಡೆ, ಕ್ರೈಸ್ತೀಯ ಹಾರೈಕೆಗಳು, ಮತ್ತು ಕ್ರಿಸ್ತನನ್ನು ಮಹಿಮೆಪಡಿಸುವ ಹಾಗೂ ಆತನ ಮಹಿಮೆಯಲ್ಲಿ ಪಾಲುಗಾರರಾಗುವದರ ವಿಸ್ಮಯ. ನಾವು ಸಹ ನಮ್ಮ ಸಹೋದರರಿಗೋಸ್ಕರ ಅದೇ ರೀತಿಯಾದ ಪ್ರಾರ್ಥನೆಯನ್ನು ಮಾಡೋಣ, ಮತ್ತು ನಮಗೋಸ್ಕರ ಅದೇ ರೀತಿಯಾದ ಪ್ರಾರ್ಥನೆಯನ್ನು ಮಾಡುವಂತೆ ನಮ್ಮ ಸಹೋದರರನ್ನು ಕೇಳಿಕೊಳ್ಳೋಣ. EC

## ಸಂಕಷ್ಟದ ಸಮಯದಲ್ಲಿ ನಂಬಿಗಸ್ತಿಕೆ (1:1-12)

ನಾವು ಕ್ರೈಸ್ತರಾದ ನಂತರದ ಮೊದಲ ಅನುಭವಗಳನ್ನು ಕುರಿತು ಜ್ಞಾಪಿಸಿಕೊಳ್ಳುವದಾದರೆ, ಉತ್ಸಾಹ, ಕೃತಜ್ಞತಾಭಾವನೆ ಮತ್ತು ಸಹೋದರ ಪ್ರೀತಿ ಇತ್ಯಾದಿಗಳು ನಮ್ಮ ಮೊದಲ ಕೆಲವು ಗಳಿಗೆಗಳ ಮತ್ತು ದಿನಗಳಲ್ಲಿದ್ದ ಪ್ರಮುಖ ಭಾಗಗಳಾಗಿದ್ದಿರುವ ಸಾಧ್ಯತೆಯು ಅಧಿಕವಿರುತ್ತದೆ. ಇವುಗಳು ಆನಂದಿಸಬಹುದಾದ ಆಶೀರ್ವಾದಗಳಾಗಿದ್ದವು. ಅಲ್ಲದೆ ಅವುಗಳು ನಮ್ಮ ಜೀವಿತಗಳಲ್ಲಿ ಮುನ್ನಡೆಯುವದಕ್ಕೆ ಉತ್ತೇಜನವನ್ನು ಸಹ ಒದಗಿಸಿದ್ದವು.

ಬಹುಶಃ ನಮ್ಮಲ್ಲಿ ಕೆಲವರಿಗೆ ಬೇರೆಯವರು ನಮ್ಮೊಂದಿಗೆ ಹೇಗೆ ನಡೆದುಕೊಳ್ಳುತ್ತಾರೋ ಎಂಬ ಕಳವಳವಿದ್ದಿರಬಹುದು, ಮತ್ತು ಬಹುಶಃ ಕೆಲವರು ಅಪಹಾಸ್ಯ ಮತ್ತು ತಿರಸ್ಕಾರಗಳನ್ನು ಅನುಭವಿಸಿರಬಹುದು. ನಾವು ಅವುಗಳಿಂದ ನಮ್ಮ ಮೇಲೆ ಬರಬಹುದಾಗಿದ್ದ ನಕಾರಾತ್ಮಕ ಪ್ರಭಾವಗಳು ಹಾಗೂ ನಿರಾಶೆಗೊಳಿಸುವಿಕೆಯನ್ನು ಹೇಗೆ ನಿಭಾಯಿಸಬೇಕೆಂಬುದನ್ನು ಕಲಿತುಕೊಳ್ಳಬೇಕಾಗಿದ್ದಿರಬಹುದು. ಕೆಲವರು ತಾವು ಕ್ರಿಸ್ತನಿಗೆ ಮಾಡಿಕೊಂಡ ಸಮರ್ಪಣೆಗೆ ಈಗಲೂ ಅಂತಹದ್ದೇ ಪ್ರತಿಕ್ರಿಯೆಗಳನ್ನು ಎದುರಿಸುತ್ತಿರಬಹುದಾಗಿದೆ.

"ಬಹಳ ಹಿಂಸೆ," "ಬಹು ವಿರೋಧ," ಮತ್ತು "ಕಷ್ಟಗಳು" ಥೆಸಲೋನಿಕದಲ್ಲಿನ ಕ್ರೈಸ್ತರ ಅನುಭವಗಳ ಭಾಗವಾಗಿದ್ದವು (1 ಥೆಸಲೋನಿಕ 1:6; 2:2, 14). ಏಕೆ? ಏಕೆಂದರೆ ಈಗ ಅವರು ಪಟ್ಟಣದಲ್ಲಿದ್ದ ಬೇರೆ ಜನರಿಗಿಂತ ವ್ಯತ್ಯಾಸವುಳ್ಳವರಾಗಿದ್ದರು. ಈ ಕ್ರೈಸ್ತರ ಮನೆಗಳಲ್ಲಿ ವಿಗ್ರಹಗಳಿರಲಿಲ್ಲ. ಅವರು ಇನ್ನು ಮೇಲೆ ವಿಗ್ರಹಾರಾಧಕ ಜನಾಂಗದ ಯಾಜಕರ ಸಲಹೆಗಳನ್ನು ಕೇಳಿಕೊಂಡು ಹೋಗುತ್ತಿರಲಿಲ್ಲ. ಅವರು ದೇವಾಲಯದಲ್ಲಿ ನಡೆಯುತ್ತಿದ್ದ ಯಜ್ಞಗಳಿಗೆ ಮತ್ತು ಪವಿತ್ರ ಮೆರವಣಿಗೆಗಳಿಗೆ ಗೈರಾಗುತ್ತಿದ್ದರು. ಅವರ ನೆರೆಯವರು ಮತ್ತು ಬಹುಶಃ ಅವರ ಬಂಧುಗಳು ಸಹ ಅವರ ಸಂಬಂಧಗಳನ್ನು, ಹಕ್ಕುಗಳನ್ನು, ಮತ್ತು ಸವಲತ್ತುಗಳನ್ನು ಕಸಿದುಕೊಳ್ಳುವ ಮೂಲಕ-ಅವರ ದೇಹಗಳನ್ನು ದಂಡಿಸುವ ಮೂಲಕ ಸಹ-ಆಗಷ್ಟೆ ಹುಟ್ಟಿದ್ದ ಅವರ ನಂಬಿಕೆಯನ್ನು ನಾಶಗೊಳಿಸುವದಕ್ಕೆ ಪ್ರಯತ್ನಿಸುತ್ತಿದ್ದರು. ಈ ಹೊಸ ಶಿಷ್ಯರಿಗಾದರೋ, ಕ್ರೈಸ್ತೀಯ ಸ್ವಾತಂತ್ರ್ಯ ಎಂದರೆ ಸಾಮಾಜಿಕವಾಗಿ ಬಹಿಷ್ಕಾರ ಆಗಿರುತ್ತಿತ್ತು-ಹೊರದೇಶದವರಂತೆ, ದಾಸರಂತೆ, ಅಥವಾ ಕುಷ್ಠರೋಗಿಗಳಂತೆ ಕಾಣಲ್ಪಡುತ್ತಿದ್ದರು.

ಕೆಲವರು ಕ್ರೈಸ್ತರಾಗಿರುವದಕ್ಕಾಗಿ ತಿರಸ್ಕರಿಸಲ್ಪಟ್ಟಿರುತ್ತಾರೆ. ಅವರು ದೇವರ ಮಾರ್ಗದಲ್ಲಿ ಜೀವಿಸುವದಕ್ಕಾಗಿ ಅಪಹಾಸ್ಯಕ್ಕೆ ಅಥವಾ ನಿಂದನೆಗೆ ಗುರಿಯಾಗಿದ್ದಾರೆ.

ಒಬ್ಬನು ಕ್ರೈಸ್ತನಾಗುವ ಬಗ್ಗೆ ಯೋಚಿಸುತ್ತಿರುವದಾದರೆ, ತಿರಸ್ಕಾರಕ್ಕೊಳಗಾಗುವ ಆಲೋಚನೆಯು ಆತನನ್ನು ಕಳವಳಕ್ಕೀಡು ಮಾಡಿರಬೇಕು.

ಈ ಪರಿಸ್ಥಿತಿಗಳಲ್ಲಿರುವ ಜನರಿಗೆ ದೇವರು ಯಾವ ಪ್ರೋತ್ಸಾಹದಾಯಕ ಸಹಾಯವನ್ನು ಒದಗಿಸಬಲ್ಲನು? ಅವರಿಗೆ 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಂತಹ ಪತ್ರಿಕೆಯು ಸಹಾಯವನ್ನು ಒದಗಿಸಬಲ್ಲದು. ಇಲ್ಲಿ ದೇವರು ಬಾಧೆಯನ್ನನುಭವಿಸುವ ಕ್ರೈಸ್ತರಿಗೆ ತನ್ನ ಜ್ಞಾನವನ್ನು ಹಂಚಿಕೊಳ್ಳುತ್ತಾನೆ. ದೇವರು ಹೇಗೆ ಕಾರ್ಯನಿರ್ವಹಿಸುತ್ತಾನೆಂಬ ಕುರಿತಾದ ಈ ಪ್ರಾಮುಖ್ಯವಾದ ಸತ್ಯಗಳನ್ನು ನಾವು ಕಲಿತುಕೊಳ್ಳುವದಾದರೆ, ನಾವೆಲ್ಲರೂ ನಮ್ಮ ಹೋರಾಟಗಳಲ್ಲಿ ಪ್ರೋತ್ಸಾಹಿಸಲ್ಪಡುವೆವು.

*ದೇವರು ನಮ್ಮನ್ನು ತನ್ನ ಮಕ್ಕಳಂತೆ ಅಮೂಲ್ಯರೆಂದೆಣಿಸುತ್ತಾನೆ (1:1-4).* ದೇವರು ತನ್ನ ಮಕ್ಕಳನ್ನು ಬೆಲೆಯುಳ್ಳವರೆಂದು ಎಣಿಸುತ್ತಾನೆ ಮತ್ತು ಕ್ರೈಸ್ತೀಯ ಗುಣಸ್ವಭಾವದ ಮೌಲ್ಯವನ್ನು ಒತ್ತಿ ಹೇಳುತ್ತಾನೆ. ತಮ್ಮ ನೆರೆಯವರ ಕೆಂಗಣ್ಣಿಗೆ ಗುರಿಯಾಗಿ ಈಗ ವಿರೋಧದಲ್ಲಿರುವವರೆಂದು ಪರಿಗಣಿಸಲ್ಪಟ್ಟವರಿಗೆ, ದೇವರು ಮತ್ತು ಯೇಸು "ಕೃಪೆ" ಹಾಗೂ "ಶಾಂತಿ"ಗಳನ್ನು ಅನುಗ್ರಹಿಸುವರು. ಅವರ ಪರಲೋಕದಲ್ಲಿನ ತಂದೆಗೆ ಮತ್ತು ಅವರ ರಕ್ಷಕನಿಗೆ ಅವರ ಪರಿಸ್ಥಿತಿಯ ಬಗ್ಗೆ ಗೊತ್ತಿದೆ ಮತ್ತು ಅವರು ಹಿತದ ಬಗ್ಗೆ ಕಳಕಳಿ ಹೊಂದಿದ್ದರು. ಅವರು ಬೋಧಕರು ತಿಳಿಸಿದ ವಂದನೆಯಲ್ಲಿ ಈ ಪ್ರೀತಿ ಮತ್ತು ಕಳಕಳಿಯು ಪ್ರತಿಬಿಂಬಿಸಲ್ಪಟ್ಟಿರುತ್ತದೆ.

ತೊಂದರೆಗೊಳಗಾಗಿರುವ ಆತ್ಮಗಳು ತಮಗಾಗಿರುವ ದೇವರ ಪ್ರೀತಿಯನ್ನು ಕುರಿತು ತಿಳಿದುಕೊಳ್ಳಬೇಕಾದ ಮತ್ತು ಅವರು ಸಹೋದರರು ತಿಳಿಸುವ ವಂದನೆಯಲ್ಲಿ ಜ್ಞಾಪಿಸಲ್ಪದಬೇಕಾದ ಅಗತ್ಯವಿತ್ತು: "ದೇವರು ನಿಮ್ಮನ್ನು ಪ್ರೀತಿಸುತ್ತಾನೆ. ದೇವರು ನಿಮ್ಮನ್ನು ಶ್ಲಾಘಿಸುತ್ತಾನೆ. ದೇವರು ನಿಮಗೆ ಯಾವದು ಅತ್ಯುತ್ತಮವೋ ಅದನ್ನೇ ಬಯಸುತ್ತಾನೆ. ತಂದೆ ಮತ್ತು ಮಗ ಇಬ್ಬರೂ ತಮ್ಮ ಹೃದಯದಲ್ಲಿ ನಿಮ್ಮ ಹಿತವನ್ನೇ ಹೊಂದಿರುತ್ತಾರೆ." ಈ ರೀತಿಯಲ್ಲಿಯೇ ಪ್ರೀತಿಯಿರುವ ಸಹೋದರರು ಮತ್ತು ಸಹೋದರಿಯರು ಬಾಧೆಗಳಲ್ಲಿರುವ ದೇವಜನರನ್ನು ಪ್ರೋತ್ಸಾಹಿಸಬಲ್ಲರು. ದೇವರು *ನಿಮ್ಮನ್ನು* ಪ್ರೀತಿಸುತ್ತಾನೆ!

ತೊಂದರೆಯಲ್ಲಿರುವರಿಗೆ ದೇವರು ಅವರ ಕ್ರೈಸ್ತೀಯ ಗುಣಸ್ವಭಾವವನ್ನು ಬೆಲೆಯುಳ್ಳದ್ದೆಂದು ಎಣಿಸುತ್ತಾನೆಂಬ ಭರವಸೆಯನ್ನು ನೀಡುವ ಅಗತ್ಯವಿರುತ್ತದೆ. ಪ್ರೀತಿ ಮತ್ತು ನಂಬಿಗಸ್ತಿಕೆಗಳು ನಿಜವಾದ ಬೆಲೆಯುಳ್ಳವುಗಳಾಗಿವೆ, ಸ್ವತ್ತುಗಳು ಮತ್ತು ಸ್ವತಃ ದೈಹಿಕ ಜೀವಿತಕ್ಕಿಂತಲೂ ಬೆಲೆಯುಳ್ಳವುಗಳಾಗಿದೆ. ಬೆಳೆಯುತ್ತಿರುವ ಪ್ರೀತಿ ಮತ್ತು ನಂಬಿಗಸ್ತಿಕೆಗಳು ಸಂಕಟಗಳ ಮಧ್ಯದಲ್ಲಿ ಸಹಿಸಿಕೊಳ್ಳಬಲ್ಲವು ಮತ್ತು ಭಕ್ತಿಹೀನರ ನಿಂದನೆಗಳನ್ನು ದಾಟಿಯೂ ಇರಬಲ್ಲವು. ಈ ಗುಣಗಳು ನಮಗೆ ಕಠಿಣ ಪರಿಸ್ಥಿತಿಗಳಲ್ಲಿ ಭಕ್ತಿವಂತರಾಗಿ ಉಳಿಯುವಂತೆ ಸಹಾಯ ಮಾಡುತ್ತವೆ.

*ದೇವರು ಹಿಂಸಿಸುವರ ವಿರುದ್ಧ ಕ್ರಮ ಕೈಗೊಳ್ಳುವನು (1:5-10).* ಹಿಂಸೆಗೊಳಗಾಗುತ್ತಿರುವವರು ಹೀಗೆ ಕೇಳಿರಬಹುದು, "ಏಕೆ ನೀತಿವಂತರೇ ಬಾಧೆಯನ್ನನುಭವಿಸುತ್ತಾರೆ, ಅನೀತಿವಂತರು ಏಕೆ ಅನುಭವಿಸುವದಿಲ್ಲ?" ಇದು

ಯೋಬನಿಗೆ ಒಂದು ಒಗಟಾಗಿತ್ತು (ಯೋಬನು 21:7-16). ಕೀರ್ತನೆಗಾರನು ಅನೇಕ ಸಾರಿ ದೇವರ ನ್ಯಾಯವನ್ನು ಅರ್ಥಮಾಡಿಕೊಳ್ಳುವದಕ್ಕೆ ಹೆಣಗಾಡುತ್ತಾನೆ (ನೋಡಿರಿ ಕೀರ್ತನೆ 13:1; 22:1-5; 73:16). ಇಂದು ಕ್ರೈಸ್ತರು ಈ ವಿಷಯದಲ್ಲಿ ತೊಳಲಾಡುತ್ತಾರೆ. ಅನ್ಯಾಯದಿಂದಾಗಿ ನಾವು ಬೇರೆಯವರ ಮೇಲೆ ಮುನಿಸಿಕೊಳ್ಳುವಂತಾಗುತ್ತದೆ ಮತ್ತು ದೇವರನ್ನು ಸಹ ತಿರಸ್ಕರಿಸುವಂತಾಗುವದು! ಆದದರಿಂದ, ಈ ವಿಷಯವನ್ನು ಜಾಗರೂಕತೆಯಿಂದ ಪರೀಕ್ಷಿಸತಕ್ಕದ್ದು.

ಈ ಸಮಸ್ಯೆಯ ಕುರಿತು ದೇವರ ದೃಷ್ಟಿಕೋನವನ್ನು ನಾವು ಅರ್ಥಮಾಡಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರುವ ವೇಳೆ, 1ನೇ ಅಧ್ಯಾಯದಲ್ಲಿ ಎರಡು ಸತ್ಯಗಳು ವಿವರಿಸಲ್ಪಡುತ್ತವೆಂಬುದನ್ನು ನಾವು ಖಚಿತವಾಗಿ ತಿಳುಕೊಳ್ಳಬಹುದು. ಮೊದಲನೆಯದಾಗಿ, ದೇವರ ಮಾರ್ಗವನ್ನು ಅಂಗೀಕರಿಸಿಕೊಳ್ಳದವರು ದಂಡಿಸಲ್ಪಡುವರು. ಇದರಲ್ಲಿ ದೇವಜನರನ್ನು ಹಿಂಸೆ ಮಾಡುವವರು ಸಹ ಸೇರಿರುತ್ತಾರೆ.

ಪಶ್ಚಾತ್ತಾಪ ಪಡದ ಹಿಂಸಕರ ಮೇಲೆ ದೇವರ ನ್ಯಾಯವಾತ ತೀರ್ಪು ಬೀಳುವದು. ಅವರನ್ನು ಪ್ರತ್ಯೇಕಿಸಿ ದಂಡನೆಯನ್ನು ಮಾಡುವ ಶಕ್ತಿ ದೇವರಿಗೆ ಇರುತ್ತದೆ. ಅವರು ಆತನನ್ನು ವಿರೋಧಿಸುವದಕ್ಕೆ ನಿಷ್ಕರ್ಷಿಸಿರುತ್ತಾರೆ, ಅದರ ಫಲಿತವಾಗಿ ದೇವರ ಆಶೀರ್ವಾದಗಳಿಲ್ಲದೆ ನಿತ್ಯತ್ವವನ್ನು ಕಳೆಯುವರು. ಏಕೈಕ ರಕ್ಷಕನಾದ ಯೇಸುವನ್ನು ತಿರಸ್ಕರಿಸುವ ಮೂಲಕ ಅವರು ರಕ್ಷಣೆಯನ್ನು ತಿರಿಸ್ಕರಿಸುತ್ತಾರೆ. ಆದಕಾರಣ, ಅವರು ಕ್ಷಮಾಪಣೆಯ ಬದಲಾಗಿ ದೇವರಿಂದ ಮತ್ತು ಆತನ ಆಶೀರ್ವಾದಗಳಿಂದ ಅಗಲಿಸಲ್ಪಡುವಿಕೆಯನ್ನು ಆರಿಸಿಕೊಂಡಿದ್ದಾರೆ.

ಎರಡನೆಯದಾಗಿ, ದೇವರು ಸಂಕಟಕ್ಕೊಳಗಾದವರಿಗೆ ಉಪಶಮನವನ್ನು ಕೊಡುವನು. ಅವರಿಗಾದರೋ, ಕೆಟ್ಟದ್ದಾಗಿ ನಡಿಸಿಕೊಳ್ಳಲ್ಪಡುವಿಕೆಯಿಂದ ವಿಶ್ರಾಂತಿಯೆಂಬುದು ಅವರ ಹಿಂಸಕರಿಗೆ ದಂಡನೆಯಾಗುತ್ತದೆ. ಆತನು ತನ್ನ ಮಕ್ಕಳನ್ನು ನಿತ್ಯವಾಗಿ ಆಶೀರ್ವದಿಸುವ ಶಕ್ತಿ ಹೊಂದಿರುತ್ತಾನೆ. ಆತನಲ್ಲಿ ತಮ್ಮ ಭರವಸವನ್ನಿಡುವವರು ಆತನ ದೊಡ್ಡ ಶಕ್ತಿಗೆ-ಪಾಪದಿಂದ ಮತ್ತು ಅವರ ಪರಿಣಾಮಗಳಿಂದ ಬಿಡಿಸಿ ರಕ್ಷಣೆಯನ್ನು ನೀಡುವ ಶಕ್ತಿ-ಶಾಶ್ವತವಾದ ಸಂಪರ್ಕವನ್ನು ಪಡೆಯುತ್ತಾರೆ! ನಮಗೆ ಇಂದಿನಿಂದ, ಅಂತ್ಯವೇ ಇಲ್ಲದ ಕಾಲದ ವರೆಗೂ ಆತನ ಆದರಣೆ ಮತ್ತು ಆರೈಕೆಯನ್ನು ಹೊಂದುವದಕ್ಕೆ ದಾರಿಯಾಗಿರುತ್ತದೆ! ಯೇಸು ಕ್ರಿಸ್ತನಲ್ಲಿ ತಮ್ಮ ನಂಬಿಕೆಯನ್ನಿಟ್ಟ ಕಾರಣಕ್ಕಾಗಿ ನಿಂದೆಗೆ ಗುರಿಯಾಗಿರುವವರಿಗೆ ಎಂಥ ಉಪಶಮನ!

*ದೇವರು ನಮ್ಮನ್ನು ಆತನ ಸೇವೆಗೆ ಸಜ್ಜುಗೊಳಿಸುತ್ತಾನೆ (1:11, 12).* ಹಿಂಸೆಗೊಳಗಾಗಿರುವ ದೇವಜನರು ದೇವರ ಸಹಾಯದೊಂದಿಗೆ ಸಾರ್ಥಕ ಜೀವನಗಳನ್ನು ಹೊಂದಬಲ್ಲರು. ಆತನ ಸೇವೆ ಮಾಡುವದಕ್ಕೆ ಮತ್ತು ನಮ್ಮ ಅನುದಿನದ ಜೀವಿತಗಳಲ್ಲಿ ಒಳ್ಳೇತನ ಹಾಗೂ ನಂಬಿಗಸ್ತಿಕೆಯನ್ನು ತೋರ್ಪಿಸುವದಕ್ಕೆ ಅಗತ್ಯವಾದದ್ದನ್ನು ದೇವರು ಒದಗಿಸುವನು. ನಮಗೆ ಶಕ್ತಿಯಿರುತ್ತದೆ-ದೇವರಶಕ್ತಿ. ನಾವು ಹಿಂಸೆಯನ್ನು ಎದುರಿಸುವಾಗ ಆತನ ಶಕ್ತಿಯನ್ನು ತೋರ್ಪಡಿಸುವಂತೆ ಆತನು ನಮಗೆ ಸಹಾಯವನ್ನು ಮಾಡುವನು.

ನಾವು ದೇವರ ಸೇವಕರಾದ ಕಾರಣ ರಕ್ಷಿಸಲ್ಪಟ್ಟಿದ್ದೇವೆಂದು ಯೋಚಿಸಬಾರದು;

ನಾವು ರಕ್ಷಿಸಲ್ಪಟ್ಟಿರುವ ಕಾರಣದಿಂದ ಸೇವಕರಾಗಿದ್ದೇವೆ. ನಾವು ಆತನ ಕೃಪೆ ಮತ್ತು ಅದು ತರುವಂತಹಹ ಆಶೀರ್ವಾದಗಳಿಗಾಗಿ ಕೃತಜ್ಞತೆಯುಳ್ಳವರಾಗಿದ್ದೇವೆ, ಅದು ನಮ್ಮ ಜೀವನದಲ್ಲಿನ ಆತನ ಕೆಲಸವನ್ನು ಪ್ರತಿಬಿಂಬಿಸುವಂತೆ ದೇವರಿಂದ ಉಪಯೋಗಿಸಿಕೊಳ್ಳಲ್ಪಡುವ ಹಾಗೆ ನಮ್ಮನ್ನು ಸಜ್ಜುಗೊಳಿಸುವದು. ಪೌಲನು ಎಫೆಸದವರಿಗೆ ಹೀಗೆ ಜ್ಞಾಪಿಸುತ್ತಾನೆ, "ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ. ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು . . ." (ಎಫೆಸ 2:8-10). ಇದು ಹೀಗಿರುವದರಿಂದ, "ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು" (ಮತ್ತಾಯ 5:16).

ಫಲಿತವು ಏನಾಗುವದು? ಜನರು ನಮ್ಮಲ್ಲಿ ಯೇಸುವನ್ನು ಕಾಣುವರು. ಸಂಕಟಗಳ ಮಧ್ಯದಲ್ಲಿಯೂ ಭಕ್ತಿಯ ಜೀವನಗಳನ್ನ ನಡಿಸುವ ಕ್ರೈಸ್ತರನ್ನು ನೋಡುವಾಗ ದೇವರು ಹೇಗೆ ವರ್ತಿಸುವನು ಮತ್ತು ಯೇಸುವಿನಲ್ಲಿ ಹೇಗೆ ನಡೆದುಕೊಂಡನು ಎಂಬುದನ್ನು ಕಾಣುವರು. ಇದು ಯೇಸುವಿಗೆ ಘನ ಮತ್ತು ಮಹಿಮೆಯನ್ನು ತರುವದು.

*ಮುಕ್ತಾಯ*. ಕ್ರೈಸ್ತೀಯ ಜೀವಿತವು ತಿರುಗುಮುರುಗಾದದ್ದು. ಸೈತಾನನ ಸೇವೆಯನ್ನು ಮಾಡುತ್ತಾ ಬಂದ ಒಬ್ಬ ವ್ಯಕ್ತಿಯು ವಿಧೇಯತೆಯಲ್ಲಿ ದೇವರ ಕಡೆಗೆ ತಿರುಗಿಕೊಳ್ಳುವನು, ಮತ್ತು ಆತನು ಕ್ಷಮಿಸಲ್ಪಡುವನು. ಯೇಸುವಿನ ಬರೋಣವು ಸಹ ದೊಡ್ಡದಾದ ರೀತಿಯಲ್ಲಿ ತಿರುಗುಮುರುಗುಗೊಳಿಸುವದು. ಸುಖವಾಗಿದ್ದವರು ಸಂಕಟಕ್ಕೊಳಪಡಿಸಲ್ಪಡುವರು ಮತ್ತು ಸಂಕಟಕ್ಕೊಳಗಾದವರು ಆದರಿಸಲ್ಪಡುವರು. ದೇವರ ಪಕ್ಷದಲ್ಲಿದ್ದವರು ಮಾತ್ರವೇ ನಿಜವಾಗಿಯೂ ಬೆಲೆಯುಳ್ಳಂತ ಜೀವನಗಳನ್ನು ನಡಿಸಿದವರೆಂಬದು ತೋರ್ಪಡಿಸಲ್ಪಡುವದು.

ಸಂಕಟಕ್ಕೊಳಾಗಿರುವ ದೇವಜನರಿಗೆ ಎಂಥ ಶ್ರೇಷ್ಠವಾದ ಸಂದೇಶ! ನಾವು ಯೇಸುವನ್ನು ಹಿಂಬಾಲಿಸುತ್ತೇವೆಂಬ ಕಾರಣಕ್ಕೆ ನಮ್ಮೊಂದಿಗೆ ಕೆಟ್ಟದ್ದಾಗಿ ನಡೆದುಕೊಳ್ಳಲ್ಪಟ್ಟರೆ, ಅದೊಂದು ಅತ್ಯಂತ ದೊಡ್ಡ ಗೌರವವೆಂಬುದನ್ನು ನೆನಪಿಟ್ಟುಕೊಳ್ಳಿರಿ. ಇದು ಪಾರಿತೋಷಕ ಹಾಗೂ ಬಹುಮಾನದ ಫಲಕಗಳಿಗಿಂತ, ಶೈಕ್ಷಣಿಕ ಪದವಿಗಳಿಗಿಂತ ಮತ್ತು ಗೌರವ ಪದವಿಗಳಿಗಿಂತ ಹೆಚ್ಚು ಬೆಲೆಯುಳ್ಳದ್ದು, ನಮ್ಮ ಹೆಸರು ಮುದ್ರಣದಲ್ಲಿ ಅಥವಾ ಬೆಳಕಿನಲ್ಲಿರುವದಕ್ಕಿಂತ ಹೆಚ್ಚು ಬೆಲೆಯುಳ್ಳದ್ದು ಆಗಿದೆ. ನಾವು ವಿಶ್ವದ ಒಡೆಯನಾದ ಕರ್ತನ ಗೌರವ ಮತ್ತು ಮಹಿಮೆಯಲ್ಲಿ ಪಾಲುಗಾರರಾಗುತ್ತೇವೆ!

ನಾವು ಸರಿಯಾದದ್ದನ್ನೇ ಮಾಡುತ್ತಿದ್ದರೂ ಸಂಕಟಗಳಿಗೊಳಗಾಗುವಾಗ, ದೇವರು ಆದರಣೆಯನ್ನು ಒದಗಿಸುತ್ತಾನೆ. ನಾವು ಅನ್ಯಾಯವಾಗಿ ಬಾಧೆಯನ್ನನುಭವಿಸುವವರಿಗೆ ಸಹಾಯವನ್ನು ಮಾಡುವಾಗ, ನಾವು ಈ ಆದರಣೆಯನ್ನು ಅವರೊಂದಿಗೆ ಹಂಚಿಕೊಳ್ಳಬಲ್ಲೆವು. ವ್ಯತಿರಿಕ್ತವಾದ ಪರಿಸ್ಥಿತಿಯಲ್ಲಿಯೂ, ನಮಗೆ ನಿತ್ಯತ್ವದಲ್ಲಿ ಗೌರವಪೂರ್ವಕ ಜೀವನಗಳಿರುವೆವೆಂಬುದನ್ನು ತಿಳಿದವರಾಗಿ ನಾವು ಈಗ ಪ್ರಯೋಜನಕರ

ಜೀವನಗಳನ್ನು ನಡೆಸಬಲ್ಲೆವು! TP

---

**ಅಡಿಟಿಪ್ಪಣಿಗಳು**

[1]A. T. Robertson, *The Epistles of Paul*, vol. 4, *Word Pictures in the New Testament* (Nashville: Broadman Press, 1931), 41. [2]C. F. Hogg and W. E. Vine, *The Epistles of Paul the Apostle to the Thessalonians* (Shreveport, La.: Lambert Publishing Co., 1977), 218. [3]Robert L. Thomas, "2 Thessalonians," in *The Expositor's Bible Commentary*, ed. Frank E. Gaebelein (Grand Rapids, Mich.: Zondervan, 1978), 11:309. [4]F. F. Bruce, *1 & 2 Thessalonians*, Word Biblical Commentary, vol. 45 (Waco, Tex.: Word Books, 1982), 149. [5]David J. Williams, *1 and 2 Thessalonians*, New International Biblical Commentary: New Testament Series, vol. 12 (Peabody, Mass.: Hendrickson Publishers, 1992), 113–14. [6]Thomas, 312. [7]Hogg and Vine, 231. [8]Robertson, 44. [9]J. E. Frame, *A Critical and Exegetical Commentary on the Epistles of St. Paul to the Thessalonians*, The International Critical Commentary (New York: Charles Scribner's Sons, 1912; reprint, Edinburgh: T. & T. Clark, 1988), 234. [10]Marvin R. Vincent, *Word Studies in the New Testament* (Grand Rapids, Mich.: Wm. B. Eerdmans Publishing Co., 1946), 4:61.

[11]Williams, 117. [12]Robertson, 46. [13]George MacDonald, *Unspoken Sermons*, Series One, "The Hands of the Father" (http://www.johannesen.com/SermonsSeries1.htm); Internet; accessed 22 May 2008. [14]Ronald A. Ward, *1 & 2 Thessalonians* (Waco, Tex.: Word Books, 1973), 147.